# ಗಣಿತ

# MATHEMATICS

## ತರಗತಿ

## III

### ಭಾಗ - 1

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2024

ST-515-1-MATHS (K)-3-VOL-1

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ,
ಭಾರತ ಭಾಗ್ಯ ವಿಧಾತಾ,
ಪಂಜಾಬ ಸಿಂಧು ಗುಜರಾತ ಮರಾಠ,
ದ್ರಾವಿಡ ಉತ್ಕಲ ವಂಗ,
ವಿಂಧ್ಯ ಹಿಮಾಚಲ ಯಮುನಾ ಗಂಗಾ,
ಉಚ್ಛಲ ಜಲಧಿತರಂಗ,
ತವಶುಭ ನಾಮೇ ಜಾಗೇ,
ತವಶುಭ ಆಶಿಷ ಮಾಗೇ,
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ,
ಜಯ ಜಯ ಜಯ ಜಯಹೇ.

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

ಗಣಿತ

3

**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in
e-mail : scertkerala@gmail.com, Phone : 0471 - 2341883,
Typesetting and Layout : SCERT
First Edition : 2024
*Printed at* : KBPS, Kakkanad, Kochi-30
© Department of General Education, Government of Kerala

ಪ್ರೀತಿಯ ಮಕ್ಕಳೇ,

ನಾವು ಗಣಿತದಲ್ಲಿ, ಆಟವಾಡಿ, ಬಣ್ಣ ಹಚ್ಚಿ, ಹಲವು ವಿಷಯಗಳನ್ನು ಅರ್ಥೈಸಿಕೊಂಡಿದ್ದೇವಲ್ಲವೇ? ಎಣಿಸುವುದಕ್ಕೂ ಲೆಕ್ಕ ಮಾಡುವುದಕ್ಕೂ ಆಕೃತಿಗಳನ್ನು ಗುರುತಿಸುವುದಕ್ಕೂ ನಮಗೆ ತಿಳಿದಿದೆ.

ಇನ್ನೂ ಹಲವಾರು ವಿಷಯಗಳನ್ನು ಕಲಿಯಲು ಬಾಕಿಯಿದೆ. ಹೆಚ್ಚುಹೆಚ್ಚು ದೊಡ್ಡ ಸಂಖ್ಯೆಗಳು, ಅವುಗಳ ಕ್ರಿಯಾರೀತಿಗಳು, ಸಂಖ್ಯಾ ಸಂಬಂಧಗಳನ್ನು ಕಂಡುಹಿಡಿಯುವುದು, ಸಮಸ್ಯಾ ಪರಿಹಾರ, ಪಟ್ಟಿಗಳ ವಿಶ್ಲೇಷಣೆ ಹೀಗೆ ಹಲವು ವಿಚಾರಗಳು........

ವಿಭಿನ್ನ ರೀತಿಯಲ್ಲಿ ಚಿಂತನೆ ಮಾಡಿ , ವಿವಿಧ ರೀತಿಗಳನ್ನು ಕಂಡುಹಿಡಿದು ಯುಕ್ತಿಪರವಾಗಿ ಸಮರ್ಥಿಸಿ ಕಂಡುಕೊಂಡ ವಿಷಯಗಳನ್ನು ಹಂಚಿಕೊಂಡು ನಾವು ಮುಂದೆ ಸಾಗುವ.....

ಪ್ರೀತಿಯಿಂದ

**ಡಾ. ಜಯಪ್ರಕಾಶ್ ಆರ್. ಕೆ.**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ

# TEXT BOOK DEVELOPMENT COMMITTEE

## Advisor

**Dr. E. Krishnan**
Department of Mathematics (Rtd.)
University College Thiruvananthapuram

## Chairman

**Dr. Gokuladasan Pilla C.**
Curriculum Head (Rtd.), SCERT

## Expert

**Dr. M. Shahidali**
Senior Lecturer, DIET Palakkad

**Dr. Rajesh K.P.**
Senior Lecturer, DIET Kannur

## Participants

**SwaminathanK**
Headmaster (Rtd)
Govt. L.P. School, Palot, Thiruvananthapuram

**Biju T.**
Headmaster
Govt. SMVLP School,
Thevalakkara, Kollam

**Sajeevan C.V.**
A.L.P. School
Kariyil, Cheruvathur,
Kasaragod

**Sreevishakan**
Headmaster (Rtd.)
G.L.P.School
Cherukulathoor, Kozhikode

**Beena Stephen**
SPTPM
Govt. UPS Kuravankonam,
Thiruvananthapuram

**Ishwarya Soman**
SMSGUPS Chandanakunnu,
Pathanamthitta

**Jiji Vergheese P.**
Trainer,
BRC Edappal

**Sujith K.R.**
UPST Meppayil East
S.B. School, Vadakara,
Kozhikode

**Hari Charutha**
Nemam,
Thiruvananthapuram

**Anoop K.P.**
HST, Drawing
PMSAPTHSS Kakkovu
Vazhayoor, Malappuram

**Dhanesan M.V.**
HSST English
GFHSS Padanakadappuram,
Kasaragod

**Shaji Mathew**
Pathanamthitta

## Kannada Version

### Subject Experts

**BALAKRISHNA P.**
Headmaster (Rtd.)
G.L.P.S. Kunjathur

### Participants

**JYOTHI N,** Headmistress, GLPS Kannur
**MELVIN D SOUZA P,** L.P.S.T, G.H.S.S. Bekur
**DEVANANDA K,** L.P.S.T., G.L.P.S. Majibail
**SHYLESH M,** Headmaster, S.S.A.L.P.S. Mudoorthoke
**SRUTHI S,** L.P.S.T., DIET Lab School Maipady

Academic Co-ordinator

**Dr. Abhilash Babu P.**
Research Officer, SCERT

**State Council of Educational Research and Training (SCERT)**
Vidyabhavan, Poojapuram, Thiruvananthapuram 695 012

# ಅನುಕ್ರಮಣಿಕೆ


| | | |
|---|---|---|
| 01 | ಆಕೃತಿಗಳನ್ನು ರಚಿಸುವ | 07 |
| 02 | ಸಂಖ್ಯಾ ಗೆಳೆಯರು | 17 |
| 03 | ಸಾವಿರ... ಸಾವಿರ... | 33 |
| 04 | ಒಟ್ಟು ಸೇರುವ | 45 |
| 05 | ಆಳೆಯುವ... ಬರೆಯುವ | 61 |
| 06 | ಕೂಡಿಸಿ... ಕೂಡಿಸಿ... ಕೂಡಿಸುವ | 75 |


ಪುಸ್ತಕದಲ್ಲಿ ಅನುಕೂಲಕ್ಕಾಗಿ ಈ ಚಿಹ್ನೆಯನ್ನು ಉಪಯೋಗಿಸಲಾಗಿದೆ.

 ಲೆಕ್ಕ ಮಾಡಿ ನೋಡುವ

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,[2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

---

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

# 1

# ಆಕೃತಿಗಳನ್ನು ರಚಿಸುವ



## ಪ್ರವೇಶೋತ್ಸವ

ಅನು ಹಾಗೂ ಸುಬಿ ಮೂರನೇ ತರಗತಿಯಲ್ಲಿ ಕಲಿಯುತ್ತಿದ್ದಾರೆ. ಪ್ರವೇಶೋತ್ಸವಕ್ಕಾಗಿ ಅವರ ಶಾಲೆಯನ್ನು ಅಲಂಕರಿಸಲಾಗಿದೆ. ತೋರಣಕ್ಕೆ ಬಣ್ಣ ಹಚ್ಚಿ ಚಿತ್ರವನ್ನು ಅಂದಗೊಳಿಸಿರಿ...




ತೋರಣದಲ್ಲಿ ಪ್ರತಿಯೊಂದು ಆಕೃತಿಯು ಎಷ್ಟೆಷ್ಟು ಇವೆ ಎಂದು ಬರೆಯಿರಿ.

| ಆಕೃತಿ |  |  |  |
|---|---|---|---|
| ಸಂಖ್ಯೆ | | | |

## ಶುಭಾಶಯ ಪತ್ರ

ಈ ವರ್ಷ ಹೊಸತಾಗಿ ಶಾಲೆಗೆ ಸೇರಿದ ವಿಧುವಿಗೆ ಶುಭಾಶಯ ಪತ್ರವನ್ನು ನೀಡಬೇಕು. ಸುಬಿ ಹಾಗೂ ಗೆಳೆಯರು ಬೊಟ್ಟುಗಳನ್ನು ಅಂಟಿಸಿ, ಚಿತ್ರಗಳನ್ನು ರಚಿಸಿ ಪತ್ರವನ್ನು ತಯಾರಿಸುತ್ತಿದ್ದಾರೆ. ನೀವು ಅವರಿಗೆ ಸಹಾಯ ಮಾಡಿರಿ.

- ಚಿತ್ರದಲ್ಲಿರುವ ಬೊಟ್ಟಿನ ಸುತ್ತಲೂ ಅದೇ ಗಾತ್ರದ ಎಷ್ಟು ಬೊಟ್ಟುಗಳನ್ನು ಅಂಟಿಸಬಹುದು?

- ನನ್ನ ಊಹೆ

- ಬೊಟ್ಟುಗಳನ್ನು ಅಂಟಿಸಿದಾಗ ಸಿಕ್ಕಿದ ಸಂಖ್ಯೆ




## ನಿಮಗೂ ರಚಿಸಲು ಸಾಧ್ಯವೇ?

ಉರುಟುಗಳನ್ನು ಉಪಯೋಗಿಸಿ ರಚಿಸಿರುವ ಒಂದು ಚಿತ್ರವನ್ನು ನೋಡಿರಿ. ಬಣ್ಣ ಹಚ್ಚಿರಿ...



ಇದೇ ರೀತಿ ಉರುಟುಗಳನ್ನು ಉಪಯೋಗಿಸಿ ಮತ್ತೊಂದು ಚಿತ್ರವನ್ನು ರಚಿಸಿರಿ..

ಉರುಟನ್ನು ರಚಿಸಿದ್ದು ಹೇಗೆ?

ಬೇರೆ ಯಾವ ಯಾವ ರೀತಿಯಲ್ಲಿ ಉರುಟನ್ನು ರಚಿಸಬಹುದು?

## ದೋಣಿಯಲ್ಲಿ ಏನೆಲ್ಲ...?

ವಿಧುವಿಗೆ ಶುಭಾಶಯ ಪತ್ರವು ಇಷ್ಟವಾಯಿತು. ಅವನು ತನ್ನ ಕೈಯಲ್ಲಿರುವ ದೋಣಿಯನ್ನು ಅವರಿಗೆ ನೀಡಿದನು.





ಬಿಡಿಸಿ ಇಟ್ಟ ದೋಣಿಯನ್ನು ನೋಡಿರಿ. ಅದರಲ್ಲಿರುವ ಆಕೃತಿಗಳು ಯಾವುವು? ಆಕೃತಿಗಳ ಸಂಖ್ಯೆಗಳನ್ನು ಬರೆದು ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಆಕೃತಿ | ಹೆಸರು | ಸಂಖ್ಯೆ |
|---|---|---|
|  | ಆಯತ | |
|  | ತ್ರಿಕೋನ | |

- ಅನು ಕಾಗದವನ್ನು ಬಿಡಿಸಿ ಅದರ ಮಡಚುಗಳ ಮೂಲಕ ಕತ್ತರಿಸಿದಾಗ ಸಿಕ್ಕಿದ ಆಕೃತಿಗಳನ್ನು ನೋಟು ಪುಸ್ತಕದಲ್ಲಿ ಅಂಟಿಸಿರುವುದನ್ನು ನೋಡಿರಿ... ಇದರಂತೆ ಹಲವು ರೀತಿಗಳಲ್ಲಿ ಅಂಟಿಸಿ ಬೇರೆ ಚಿತ್ರಗಳನ್ನು ರಚಿಸಿರಿ...







### ಆಕೃತಿಗಳನ್ನು ರಚಿಸುವ



ಇದೇ ರೀತಿಯ ಒಂದು ಆಯತವನ್ನು ಎರಡು ಭಾಗಗಳಾಗಿ ಕತ್ತರಿಸಿ ಆ ಭಾಗಗಳನ್ನು ಹಲವು ರೀತಿಯಲ್ಲಿ ಜೋಡಿಸಿ ನೋಡಿರಿ... ಇನ್ನು ನಾಲ್ಕು ಭಾಗಗಳಾಗಿ ಕತ್ತರಿಸಿ ಜೋಡಿಸಿ ನೋಡಿರಿ...

## ಆಕೃತಿಗಳನ್ನು ರಚಿಸುವ



ಅನು ಮತ್ತು ಗೆಳೆಯರು ಮಡಲ ಕಡ್ಡಿಯ ತುಂಡುಗಳನ್ನು ಉಪಯೋಗಿಸಿ ಆಯತ, ತ್ರಿಕೋನ ಎಂಬಿವುಗಳನ್ನು ರಚಿಸುತ್ತಿದ್ದಾರೆ.

- ಸಮಾನ ಅಳತೆಯ 24 ಮಡಲ ಕಡ್ಡಿಗಳ ತುಂಡುಗಳನ್ನು ಉಪಯೋಗಿಸಿ ಆಯತಗಳನ್ನು ಮತ್ತು ತ್ರಿಕೋನಗಳನ್ನು ರಚಿಸಿರಿ. ರಚಿಸಿದ ಆಕೃತಿಗಳ ಸಂಖ್ಯೆಯನ್ನು ಪಟ್ಟಿಯಲ್ಲಿ ಬರೆಯಿರಿ.

| ಆಕೃತಿ | ಸಂಖ್ಯೆ |
|---|---|
| ತ್ರಿಕೋನ | |
| ಆಯತ | |

- ಆಯತ, ತ್ರಿಕೋನವನ್ನು ಇಲ್ಲಿ ರಚಿಸಿರಿ.

ಆಯತ

ತ್ರಿಕೋನ

ಒಂದು ಆಯತವನ್ನು ರಚಿಸಲು ಎಷ್ಟು ಮಡಲ ಕಡ್ಡಿಗಳನ್ನು ಉಪಯೋಗಿಸಲಾಯಿತು?

ಒಂದು ತ್ರಿಕೋನವನ್ನು ರಚಿಸುವುದಕ್ಕೆ....?

## ಟೈಲ್ ಡಿಸೈನುಗಳು

ಗ್ರಾಮ ಪಂಚಾಯತ್ ವತಿಯಿಂದ ಶಾಲೆಯಲ್ಲಿ ನಿರ್ಮಿಸಿದ ಸ್ಮಾರ್ಟ್ ಕ್ಲಾಸ್ ರೂಮಿನ ನೆಲಕ್ಕೆ ಟೈಲ್‌ಗಳನ್ನು ಹಾಸಲಾಗಿದೆ.

ಸುಂದರವಾಗಿದೆಯಲ್ಲವೇ?



ಮಕ್ಕಳು ರಚಿಸಿ ಬಣ್ಣಹಚ್ಚಿದ ಟೈಲ್ ಡಿಸೈನುಗಳನ್ನು ನೋಡಿರಿ...

ಅನು ರಚಿಸಿದ್ದು



ಸುಬಿ ರಚಿಸಿದ್ದು



ವಿಧು ರಚಿಸಿದ್ದು



ಕೆಳಗೆ ನೀಡಲಾದ ಚುಕ್ಕೆಗಳನ್ನು ಜೋಡಿಸಿ ಒಂದು ಟೈಲ್ ಡಿಸೈನ್ ರಚಿಸಿ ಬಣ್ಣಹಚ್ಚಿರಿ... ಯಾವೆಲ್ಲಾ ರೀತಿಯಲ್ಲಿ ಚುಕ್ಕೆಗಳನ್ನು ಜೋಡಿಸಿ ಡಿಸೈನುಗಳನ್ನು ರಚಿಸಬಹುದು ಎಂದು ಯೋಚಿಸಿರಿ.



- ಚುಕ್ಕೆಗಳ ಮೂಲಕ ಕತ್ತರಿಸಿದಾಗ ಸಿಗುವ ಆಕೃತಿ ಯಾವುದು?

ಎ



ಬಿ



ಸಿ



- ಕೆಳಗೆ ನೀಡಿರುವ ಆಕೃತಿಗಳಿಗೆ ಒಂದು ಗೆರೆ ಎಳೆದು ಎರಡು ತ್ರಿಕೋನಗಳನ್ನಾಗಿ ಮಾಡಿರಿ... ಗೆರೆ ಎಳೆದು ನೋಡಿರಿ... ತ್ರಿಕೋನಗಳನ್ನಾಗಿ ಮಾಡಲು ಸಾಧ್ಯವಿಲ್ಲದ್ದು ಯಾವುದು?

ಎ ಬಿ ಸಿ ಡಿ ಇ



ಸಾಧ್ಯವಿಲ್ಲದ್ದಕ್ಕೆ (✓) ಮಾಡಿರಿ

| ಎ | ಬಿ | ಸಿ | ಡಿ | ಇ |
|---|---|---|---|---|

## ಮುಂದಿನದ್ದು ಯಾವುದು? ರಚಿಸಿ ನೋಡಿರಿ.

- 

- 

ಇದೇ ರೀತಿಯ ಬೇರೆ ನಮೂನೆಗಳನ್ನು ರಚಿಸಬಹುದೇ?

-
-

## ಸುತ್ತಮುತ್ತಲೂ ಕಾಣುವ ಆಕೃತಿಗಳು

ನಿಮಗೆ ಪರಿಚಯವಿರುವ ಯಾವ ಯಾವ ಆಕೃತಿಗಳು ಈ ಚಿತ್ರದಲ್ಲಿವೆ?



ನಿಮ್ಮ ಶಾಲೆ ಮತ್ತು ಪರಿಸರದಲ್ಲಿ ಕೆಳಗೆ ನೀಡಲಾದ ಆಕೃತಿಯಲ್ಲಿರುವ ವಸ್ತುಗಳನ್ನು ಪಟ್ಟಿಮಾಡಿರಿ.

| ಆಯತ | ತ್ರಿಕೋನ | ಉರುಟು |
|---|---|---|
| | | |

## ಮರದತುಂಡಿನ ಆಕೃತಿಗಳು

ಅನು ಮತ್ತು ಗೆಳೆಯರು ಮರದ ತುಂಡುಗಳನ್ನು ಉಪಯೋಗಿಸಿ ಆಕೃತಿಗಳನ್ನು ಮಾಡಿ ಆಟವಾಡುತ್ತಿದ್ದಾರೆ.

ನೀವೂ ಹೀಗೆ ಆಡಿರಿ. ಅತಿ ಹೆಚ್ಚು ಎತ್ತರಕ್ಕೆ ಅಟ್ಟಿ ಇಟ್ಟವರು ಯಾರು?



• ಆಯತಗಟ್ಟಿ ಹಾಗೂ ಗೋಲಾಕೃತಿಯಲ್ಲಿರುವ ವಸ್ತುಗಳ ಹೆಸರು ಬರೆಯಿರಿ.

| ಆಯತಗಟ್ಟಿಗಳು | ಗೋಲಗಳು |
|---|---|
| | |




## ವೆಜಿಟೆಬಲ್ ಪ್ರಿಂಟಿಂಗ್

ವೃತ್ತಿ ಪರಿಚಯ ಮೇಳದ ವೆಜಿಟೆಬಲ್ ಪ್ರಿಂಟಿಂಗ್ ಸ್ಪರ್ಧೆಯಲ್ಲಿ ವಿಧು ತಯಾರಿಸಿದ ಟೇಬಲ್ ಕ್ಲೋತ್ ನೋಡಿರಿ.

ಬೆಂಡೆಕಾಯಿ, ಕ್ಯಾರೆಟ್, ಬಟಾಟೆ, ಈರುಳ್ಳಿ ಎಂಬೀ ತರಕಾರಿಗಳನ್ನು ಉಪಯೋಗಿಸಲಾಗಿದೆ.

ನೀವೂ ವೆಜಿಟೆಬಲ್ ಪ್ರಿಂಟಿಂಗ್ ತಯಾರಿಸಿರಿ.



## ಮೌಲ್ಯಮಾಪನ ಚಟುವಟಿಕೆಗಳು

1. ಏಳನೇ ಪುಟದ ಚಿತ್ರಗಳನ್ನು ನೋಡಿರಿ. ನಿಮಗೆ ಹೆಚ್ಚು ಇಷ್ಟವಾದ ಚಿತ್ರ ಯಾವುದು?

   ಚಿತ್ರದಲ್ಲಿ ಯಾವ ಯಾವ ಆಕೃತಿಗಳು ಇವೆ?

   ಇದೇ ರೀತಿಯ ಒಂದನ್ನು ಸ್ಯಾಂಡ್ ಟ್ರೇ (sand tray) ಯಲ್ಲಿ ತಯಾರಿಸಿರಿ.

**2.** ಚಿತ್ರ ರಚಿಸಿರಿ.

ತ್ರಿಕೋನ, ಆಯತ, ಉರುಟು ಎಂಬಿವುಗಳನ್ನು ಉಪಯೋಗಿಸಿ ಇಷ್ಟವಿರುವ ಒಂದು ಆಕೃತಿಯ ಚಿತ್ರವನ್ನು ರಚಿಸಿರಿ.

**3.** ಚಿತ್ರಕ್ಕೆ ಬಣ್ಣ ಹಚ್ಚಿ ಅಂದಗೊಳಿಸಿರಿ.



# 2

# ಸಂಖ್ಯಾ ಗೆಳೆಯರು

## ಕೋಣೆ ತುಂಬಿಸುವ...

ಇದು ಟೋಕನುಗಳನ್ನು ಉಪಯೋಗಿಸಿ ಆಡುವ ಒಂದು ಆಟವಾಗಿದೆ.

1 ರಿಂದ 100 ರ ವರೆಗಿನ ಟೋಕನುಗಳನ್ನು ಉಪಯೋಗಿಸಿ ಕೋಣೆಗಳನ್ನು ತುಂಬಿಸಬೇಕು. ಮಿನ್ನ ಮತ್ತು ಗೆಳೆಯರು ಆಡಿದ ಆಟವನ್ನು ನೀವೂ ಆಡಿರಿ... ಟೀಚರ್ ನಿಮಗೆ ಸಹಾಯ ಮಾಡುತ್ತಾರೆ.

| | | | | | | | | | |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 11 | | | | | | | | | |
| 21 | | | | | | | | | |
| | | | | | | | | | |
| | | | | | | | | | |
| | | | | 55 | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | 100 |

65 ಎಂದು ಬರೆದ ಟೋಕನನ್ನು ಎಲ್ಲಿ ಇರಿಸುವಿರಿ? ಹೇಗೆ ಕಂಡುಹಿಡಿದಿರಿ? 1 ರಿಂದ 100 ರ ವರೆಗೆ ಬರೆದ ಟೋಕನುಗಳನ್ನು ಸೂಕ್ತವಾದ ಕೋಣೆಗಳಲ್ಲಿ ಇರಿಸಿರಿ. ಹಳದಿ ಬಣ್ಣದ ಕೋಣೆಗಳ ಸಂಖ್ಯೆಗಳೊಳಗೆ ಇರುವ ಸಂಬಂಧವೇನು? ಇತರ ನಮೂನೆಗಳನ್ನು ಕಂಡುಹಿಡಿದು ವಿವಿಧ ಬಣ್ಣಗಳನ್ನು ಹಚ್ಚಿರಿ.

ST-515-3-MATHS (K)-3-VOL-1

# ಶಾಲಾ ಸ್ಟೋರ್



ಬೆಲೆ ವಿವರ ಪಟ್ಟಿ

| ವಸ್ತುಗಳು | ಬೆಲೆ |
|---|---|
| ಕ್ರಯೋನ್ಸ್ | 25 ರೂ. |
| ಪೆನ್ನು | 20 ರೂ. |
| ಸ್ಕೆಚ್ ಪೆನ್ನು (ಪ್ಯಾಕೆಟ್) | 40 ರೂ. |
| ನೋಟು ಪುಸ್ತಕ | 60 ರೂ. |
| ಮಾರ್ಕರ್ ಪೆನ್ನು (ಪ್ಯಾಕೆಟ್) | 75 ರೂ. |
| ಸ್ಕೇಲು | 5 ರೂ. |
| ಬ್ರೌನ್ ಪೇಪರ್ | 15 ರೂ. |

ಮಿನ್ನ 100 ರೂಪಾಯಿಯ ವಸ್ತುಗಳನ್ನು ಖರೀದಿಸಿದಳು. ಯಾವೆಲ್ಲ ವಸ್ತುಗಳನ್ನು ಅವಳು ಖರೀದಿಸಿರಬಹುದು?

ನನ್ನ ಲೆಕ್ಕ

ಸಹಪಾಠಿಯ ಲೆಕ್ಕ



## ಪೆನ್ಸಿಲ್ ಕಂಪೆನಿ




ಮಿನ್ನಳ ತಂದೆಗೆ ಪೆನ್ಸಿಲ್ ಕಂಪೆನಿಯಿದೆ. ಒಂದು ಪ್ಯಾಕೆಟಿನಲ್ಲಿ 10 ಪೆನ್ಸಿಲುಗಳನ್ನು ತುಂಬಿಸುತ್ತಾರೆ. 10 ಪ್ಯಾಕೆಟುಗಳನ್ನು ಒಂದು ಪೆಟ್ಟಿಗೆಯೊಳಗೆ ಇರಿಸುತ್ತಾರೆ.

| | |
|---|---|
| ಒಂದು ಪ್ಯಾಕೆಟಿನಲ್ಲಿರುವ ಪೆನ್ಸಿಲುಗಳ ಸಂಖ್ಯೆ. | |
| ಒಂದು ಪೆಟ್ಟಿಗೆಯಲ್ಲಿರುವ ಪ್ಯಾಕೆಟ್ ಗಳ ಸಂಖ್ಯೆ. | |
| ಒಂದು ಪೆಟ್ಟಿಗೆಯಲ್ಲಿರುವ ಒಟ್ಟು ಪೆನ್ಸಿಲುಗಳ ಸಂಖ್ಯೆ. | |

ಪೆನ್ಸಿಲುಗಳನ್ನು ಪೆಟ್ಟಿಗೆಯಲ್ಲಿ ಇರಿಸಿರುವುದನ್ನು ನೋಡಿರಿ...
ಪೆನ್ಸಿಲುಗಳ ಸಂಖ್ಯೆಯನ್ನು ಬರೆದು ಕೋಣೆಯನ್ನು ಪೂರ್ತಿಗೊಳಿಸಿರಿ.

| | |
|---|---|
|  | |
|  | |
|  | |
|  | |
|  | |
|  | |
|  | |
|  | |
|  | |

10 ಪೆಟ್ಟಿಗೆಗಳಲ್ಲಿ ಒಟ್ಟು ಎಷ್ಟು ಪೆನ್ಸಿಲುಗಳು ಇರಬಹುದು?

## ನೀತಿ ಸ್ಟೋರ್

ನೀತಿ ಸ್ಟೋರಿಗೆ ಸಾವಿರ ಪೆನ್ಸಿಲುಗಳ ಅಗತ್ಯವಿದೆ. ಮಿನ್ನ ಮತ್ತು ಅವಳ ತಂದೆ ಎರಡು ಚೀಲಗಳಲ್ಲಿ ಸಮಾನವಾಗಿ ಪೆನ್ಸಿಲ್ ಪೆಟ್ಟಿಗೆಗಳನ್ನು ತುಂಬಿಸಿದರು. ಪ್ರತಿಯೊಂದು ಚೀಲದಲ್ಲೂ ಇರುವ ಪೆನ್ಸಿಲುಗಳ ಸಂಖ್ಯೆ ಎಷ್ಟು?




## ಚೀಲದಲ್ಲಿ ಎಷ್ಟು?

ಚೀಲದಲ್ಲಿ ಎಷ್ಟರಂತೆ ಪೆನ್ಸಿಲುಗಳಿರಬಹುದು?




| | | | |
|---|---|---|---|
| 300 + 700 = 1000 | 100 + ......... = 1000 | ........ + ........ = 1000 | ........ + ........ = 1000 |

## ಸುಲಭ ಸ್ಟೋರ್

ಸುಲಭ ಸ್ಟೋರಿಗೆ ಎರಡು ಚೀಲಗಳಲ್ಲಾಗಿ 800 ಪೆನ್ಸಿಲ್‌ಗಳನ್ನು ನೀಡಲಾಯಿತು. ಪ್ರತಿಯೊಂದು ಚೀಲದಲ್ಲಿ ಇರಬಹುದಾದ ಪೆನ್ಸಿಲ್‌ಗಳು ಎಷ್ಟು?

ಕೆಳಗಿನ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಚೀಲ 1 | ಚೀಲ 2 | ಒಟ್ಟು |
|---|---|---|
| 400 | 400 | 800 |
| 100 | | 800 |
| | | 800 |
| | | 800 |

ನೂರುಗಳ ಗುಂಪುಗಳಾಗಿ ಬರೆಯಿರಿ.

300 + 400 → 700

900

600

| ಸಮಾನವಾದ ಗುಂಪು | |
|---|---|
| 100 +100 | = ______ |
| 250 + ______ | = 500 |
| 300 + 300 | = ______ |
| ______+ ______ | = 700 |
| ______+ ______ | = 900 |

## ಅದಲು ಬದಲಾಯಿತು

ಶಾಲೆಗಾಗಿ 870 ಪೆನ್ಸಿಲುಗಳನ್ನು 100 ರ ಮತ್ತು 10 ರ ಪ್ಯಾಕೆಟುಗಳಾಗಿ ಮಾಡಲು ಹೇಳಿದಾಗ ಮಿನ್ನಳು 7 ನೂರುಗಳ ಮತ್ತು 8 ಹತ್ತುಗಳ ಪ್ಯಾಕೆಟುಗಳನ್ನು ಮಾಡಿದಳು. ಪ್ಯಾಕೆಟುಗಳಾಗಿ ಮಾಡಿದ ಪೆನ್ಸಿಲುಗಳ ಸಂಖ್ಯೆ ಎಷ್ಟು? ಇನ್ನು ಎಷ್ಟು ಪೆನ್ಸಿಲುಗಳು ಬಾಕಿ ಇವೆ?

ಪ್ರಶ್ನೆ ಓದಿದಾಗ ನನಗೆ ಅರ್ಥವಾದದ್ದು

ಉತ್ತರ ಕಂಡುಹಿಡಿಯಲು ಬೇಕಾದ ವಿವರಗಳು

ನಾನು ಮಾಡಿದ ರೀತಿ

ಉತ್ತರ

# ಪಿಂಚಣಿ ಬಂತು

ಹಾಲು ಮಾರುವವನಿಗೆ 200 ರೂಪಾಯಿ, ದಿನಸಿ ಅಂಗಡಿಯವನಿಗೆ 500 ರೂಪಾಯಿ, ಮಿನ್ನಳಿಗೆ 100 ರೂಪಾಯಿಗಳನ್ನು ನೀಡಬೇಕು.



ಒಟ್ಟು ಎಷ್ಟು ರೂಪಾಯಿಗಳು ಬೇಕು? [ ]



ಅಜ್ಜಿ ತಂದ 100 ರೂಪಾಯಿಗಳನ್ನು ಕುಡಿಕೆಯಲ್ಲಿ ಹಾಕುತ್ತೇನೆ.



ನಾನು ದಿನಾಲೂ ಒಂದು ರೂಪಾಯಿಯಂತೆ ನೀಡುವೆನು.



ಪ್ರತಿದಿನ ಕುಡಿಕೆಯಲ್ಲಿರುವ ಒಟ್ಟು ಹಣ ಎಷ್ಟೆಂದು ಮಿನ್ನಳು ಲೆಕ್ಕ ಮಾಡಿ ಕಾರ್ಡಿನಲ್ಲಿ ಬರೆದಳು. ಕಾರ್ಡ್ ಪೂರ್ತಿಗೊಳಿಸಿರಿ...

| ಪ್ರತಿದಿನ ಲಭಿಸಿದ್ದು | ಸ್ಥಾನಬೆಲೆ ಕಾರ್ಡನ್ನಿಟ್ಟು ನೋಡಿದಾಗ | ಮೊತ್ತ |
|---|---|---|
| ಒಂದನೇ ದಿನ | 1 0 0 ▷ | 100 |
| ಎರಡನೇ ದಿನ | 1 0 0 ▷ 1 ▷ | 100 + 1 = 101 |
| ಐದನೇ ದಿನ | | |
| ಆರನೇ ದಿನ | | |
| ಎಂಟನೇ ದಿನ | | |
| ಒಂಬತ್ತನೇ ದಿನ | | |
| ಹತ್ತನೇ ದಿನ | | |
| ಹನ್ನೊಂದನೇ ದಿನ | | |

ಇಪ್ಪತ್ತೊಂದನೇ ದಿನ ಎಷ್ಟು ರೂಪಾಯಿ? [ ]

ಐವತ್ತ ನಾಲ್ಕನೇ ದಿನ ಎಷ್ಟು ರೂಪಾಯಿ? [ ]

## ಆರೋಗ್ಯ ಸರ್ವೇ

ಆರೋಗ್ಯ ಸರ್ವೇಯು ನಡೆಯುತ್ತಿದೆ.. ಮನೆ ನಂಬರುಗಳ ಕ್ರಮದಲ್ಲಿ ಸರ್ವೇ ಮಾಡಲಾಗುತ್ತಿದೆ. ಅವರು ಮಿನ್ನಳ ಮನೆಗೆ ಬಂದರು. ಅವಳ ಮನೆ ನಂಬರು 296 ಆಗಿದೆ. ನಂತರ ಸರ್ವೇ ಮಾಡಿದ ಮನೆ ನಂಬರುಗಳನ್ನು ಕ್ರಮವಾಗಿ ಬರೆಯಿರಿ... ಮನೆಗಳಿಗೆ ನಿಮಗೆ ಇಷ್ಟವಿರುವ ಬಣ್ಣವನ್ನು ಹಚ್ಚಿರಿ.



## ಪೆನ್ಸಿಲುಗಳ ಬೆಲೆ

ಮಿನ್ಹಳ ತಂದೆಯ ಕಂಪೆನಿಯಿಂದ ಅನಯ್ ಒಂದು ಪೆಟ್ಟಿಗೆ ಪೆನ್ಸಿಲುಗಳನ್ನು ಖರೀದಿಸಿದನು. ಅದರ ಬೆಲೆ 300 ರೂಪಾಯಿಗಳು. ಯಾವ ಯಾವ ರೀತಿಯಲ್ಲಿ ನೋಟುಗಳನ್ನು ನೀಡಿರಬಹುದು?




























ನಾನು ಮಾಡಿದ ರೀತಿ

ಸಹಪಾಠಿ ಮಾಡಿದ ರೀತಿ

ಚಿತ್ರದಲ್ಲಿ ನೀಡಿರುವ ಎಲ್ಲಾ ನೋಟುಗಳು ಮತ್ತು ನಾಣ್ಯಗಳು ಸೇರಿದರೆ ಒಟ್ಟು ಎಷ್ಟು ರೂಪಾಯಿಗಳಾಗಬಹುದು?

ಈ ಸಂಖ್ಯೆಯನ್ನು ಅಬಾಕಾಸ್‌ನಲ್ಲಿ ಚಿತ್ರಿಸಿ ತೋರಿಸಬಹುದೇ?






ಅಬಾಕಸಿನಲ್ಲಿ ಇರುವ ಸಂಖ್ಯೆ ಯಾವುದು?

ಸಂಖ್ಯೆ ಎಷ್ಟು?

ಈ ಚಿತ್ರದಲ್ಲಿ ಸಂಖ್ಯೆ 764 ಆಗುವಂತೆ ಮಣಿಗಳನ್ನು ಚಿತ್ರಿಸಿರಿ.

ಮಣಿಗಳನ್ನು ಚಿತ್ರಿಸಿ ಸಂಖ್ಯೆಯನ್ನು ಬರೆಯಿರಿ..

## ಚೆಕ್ ಬರೆಯುವ

ಮಿನ್ನುಳ ತಂದೆಯ ಕೈಯಲ್ಲಿರುವ ಚೆಕ್ ನೋಡಿರಿ. ಸಂಖ್ಯೆಯನ್ನು ಅಕ್ಷರಗಳಲ್ಲಿ ಮಾತ್ರ ಬರೆಯಲಾಗಿದೆ. ಅದನ್ನು ಅಂಕೆಗಳಲ್ಲಿ ಬರೆಯಿರಿ.




ಪಟ್ಟಿಯನ್ನು ಪೂರ್ತಿಗೊಳಿಸಿರಿ

| ಅಂಕೆಗಳಲ್ಲಿ | ಅಕ್ಷರಗಳಲ್ಲಿ |
|---|---|
| 125 | |
| | ನಾನ್ನೂರ ಐದು |
| | ಎಂಟು ನೂರ ತೊಂಬತ್ತು |
| | ಮುನ್ನೂರ ನಲುವತ್ತೆರಡು |
| 617 | |
| 550 | |
| 261 | |

## ಬ್ಯಾಂಕಿನಲ್ಲಿ ಹಣ ಪಾವತಿ

ಬ್ಯಾಂಕಿನ ಹಣ ಲೇವಣಿ ಚೀಟಿಯನ್ನು ನೋಡಿರಿ. ಬ್ಯಾಂಕಿಗೆ ನೀಡುವ ನೋಟುಗಳ ಸಂಖ್ಯೆ ಮತ್ತು ಒಟ್ಟು ಮೊತ್ತವನ್ನು ಅದರಲ್ಲಿ ಬರೆಯಬೇಕು.

ಮಿನ್ನಳ ತಂದೆ 800 ರೂಪಾಯಿ ಪಾವತಿಸಲು 6 ನೋಟುಗಳನ್ನು ಬ್ಯಾಂಕಿಗೆ ನೀಡಿದರು. ಹಾಗಾದರೆ ಯಾವ ಯಾವ ನೋಟುಗಳನ್ನು ಬ್ಯಾಂಕಿಗೆ ನೀಡಿರಬಹುದು?

ಅಕೌಂಟ್ ನಂಬರ್ ☐☐☐☐☐☐☐☐☐☐☐ ದಿನಾಂಕ ______

ಅಕೌಂಟ್ ದಾರನ ಹೆಸರು ______

| ಬ್ಯಾಂಕ್ & ಬ್ರಾಂಚ್ | ಚೆಕ್ ನಂಬರ್ | ಮೊತ್ತ |
|---|---|---|
| | | ₹ |
| | | ₹ |
| | | ₹ |
| | ಒಟ್ಟು | ₹ |

| ರೂಪಾಯಿ | ಮೊತ್ತ |
|---|---|
| 500 x | ₹ |
| 200 x | ₹ |
| 100 x | ₹ |
| 50 x | ₹ |
| 20 x | ₹ |
| 10 x | ₹ |
| 5 x | ₹ |
| 2 x | ₹ |
| 1 x | ₹ |
| ನಾಣ್ಯಗಳು | ₹ |
| ಒಟ್ಟು | ₹ |

ಮೊತ್ತ ಅಕ್ಷರದಲ್ಲಿ ______

ಹಣ ನಿಕ್ಷೇಪಿಸುವ ವ್ಯಕ್ತಿಯ ಹೆಸರು ______

ಹಣ ನಿಕ್ಷೇಪಿಸುವ ವ್ಯಕ್ತಿಯ ಸಹಿ ______

## ನೋಟುಗಳ ಸಂಖ್ಯೆ

ನನ್ನಲ್ಲಿ 370 ರೂಪಾಯಿ ಬಾಕಿ ಇದೆ. ಈ ಸಂಖ್ಯೆಯ ಅಂಕೆಗಳ ಮೊತ್ತಕ್ಕೆ ಸಮಾನವಾದ ನೋಟುಗಳು ನನ್ನಲ್ಲಿವೆ. ಹಾಗಾದರೆ ಯಾವ ಯಾವ ನೋಟುಗಳು ಎಷ್ಟೆಷ್ಟಿವೆ?



## ಮೊತ್ತ ಹತ್ತು

109 ಎಂಬ ಸಂಖ್ಯೆಯ ಅಂಕೆಗಳ ಮೊತ್ತವು 1 + 0 + 9 = 10

118 ಎಂಬ ಸಂಖ್ಯೆಯ ಅಂಕೆಗಳ ಮೊತ್ತ ಎಷ್ಟು?

ಇನ್ನೊಂದು ಸಂಖ್ಯೆ 127 ಆಗಿದೆಯಲ್ಲವೇ?

ಅಂಕೆಗಳ ಮೊತ್ತವು 10 ಸಿಗುವ ಎಷ್ಟು ಸಂಖ್ಯೆಗಳಿವೆ?

| | |
|---|---|
| 100 ಮತ್ತು 200 ರ ನಡುವೆ | |
| 200 ಮತ್ತು 300 ರ ನಡುವೆ | |
| 300 ಮತ್ತು 400 ರ ನಡುವೆ | |
| ಒಟ್ಟು ಎಷ್ಟು ಮೂರಂಕೆ ಸಂಖ್ಯೆಗಳಿವೆ? | |



ನನ್ನ ಕೈಯಲ್ಲಿ 100 ರೂಪಾಯಿ, 10 ರೂಪಾಯಿ ನೋಟುಗಳು ಹಾಗೂ ಒಂದು ರೂಪಾಯಿ ನಾಣ್ಯಗಳು ಸೇರಿ ಒಟ್ಟು 456 ರೂಪಾಯಿಗಳಿವೆ. ಅತಿ ಕಡಿಮೆಯೆಂದರೆ ಎಷ್ಟು ನೋಟುಗಳು ಮತ್ತು ನಾಣ್ಯಗಳು ಸೇರಿದರೆ 456 ರೂಪಾಯಿಗಳಾಗಬಹುದು?

6 ನೂರು ರೂಪಾಯಿಗಳು, 8 ಹತ್ತು ರೂಪಾಯಿಗಳು, 5 ಒಂದು ರೂಪಾಯಿಗಳು ಸೇರಿದರೆ ಎಷ್ಟು ರೂಪಾಯಿಗಳಾಗುವುದು?

4 ನೂರು ರೂಪಾಯಿಗಳು ಮತ್ತು 9 ಒಂದು ರೂಪಾಯಿಗಳು ಸೇರಿದರೆ?

ಮುನ್ನೂರು ರೂಪಾಯಿಗಳು

- 3 ನೂರು ರೂಪಾಯಿಗಳು
- ......... ಹತ್ತು ರೂಪಾಯಿಗಳು
- ......... ಇಪ್ಪತ್ತು ರೂಪಾಯಿಗಳು
- ................ ಐವತ್ತು ರೂಪಾಯಿಗಳು
- ................ ಐದು ರೂಪಾಯಿಗಳು
- ................ ಒಂದು ರೂಪಾಯಿಗಳು

## ಕಾರ್ನರ್ ಪಿ.ಟಿ.ಎ.






ತಂದೆ ಕಾರ್ನರ್ ಪಿ.ಟಿ.ಎ.ಗಾಗಿ ಆರು ಕಿಲೋಗ್ರಾಂ ಬಾಳೆಹಣ್ಣು ಖರೀದಿಸಿದರು. ಒಂದು ಕಿಲೋಗ್ರಾಂ ಬಾಳೆಹಣ್ಣಿನ ಬೆಲೆ 50 ರೂಪಾಯಿಗಳಾಗಿವೆ. ಅಂಗಡಿಯವನಿಗೆ 500 ರೂಪಾಯಿಗಳನ್ನು ನೀಡಿದರು. ಅಂಗಡಿಯವನು ಬಾಕಿ ಮೂರು ವಿಧದ ನೋಟುಗಳನ್ನು ನೀಡಿದನು. ಹಾಗಾದರೆ ಯಾವ ಯಾವ ನೋಟುಗಳನ್ನು ನೀಡಿರಬಹುದು?

ಪ್ರತಿಯೊಂದು ಎಷ್ಟು?

| ನೋಟು | ಸಂಖ್ಯೆ |
|---|---|
| | |
| | |
| | |

ಬಾಕಿ ಲಭಿಸಿದ್ದು ನಾಲ್ಕು ವಿಧದ ನೋಟುಗಳಾದರೆ?

| ನೋಟು | ಸಂಖ್ಯೆ |
|---|---|
| | |
| | |
| | |
| | |

## ಡ್ರ್ಯಾಗನ್

ಮಿನ್ನ ಮತ್ತು ಗೆಳೆಯರು ಪಾರ್ಕ್‌ಗೆ ಬಂದರು.




ಡ್ರ್ಯಾಗನಿನಲ್ಲಿ ಮುಂದಿನ ಸಂಖ್ಯೆಗಳನ್ನು ಬರೆಯಿರಿ...




ಓದಿರಿ... ಸಂಖ್ಯೆಗಳನ್ನು ಬರೆಯಿರಿ...

| | | | |
|---|---|---|---|
| ಎಂಟುನೂರ ತೊಂಬತ್ತೊಂಬತ್ತು | | ಒಂಬೈನೂರ ತೊಂಬತ್ತು | |
| ಒಂಬೈನೂರು | | ಒಂಬೈನೂರ ತೊಂಬತ್ತೈದು | |
| ಒಂಬೈನೂರ ಒಂದು | | ಒಂಬೈನೂರ ತೊಂಬತ್ತೆಂಟು | |

# ಅಣ್ಣನ ಉಡುಗೊರೆ




ಮಿನ್ನಳಿಗೆ ಅವಳ ಅಣ್ಣ ಒಂದು ಉಡುಗೊರೆ ನೀಡಿದನು. ಅದು ಕೇರಳದ ನದಿಗಳನ್ನು ಗುರುತಿಸಿದ ಚಿತ್ರವಾಗಿತ್ತು. ಅವಳಿಗೆ ಉಡುಗೊರೆ ತುಂಬಾ ಇಷ್ಟವಾಯಿತು.

ಕೇರಳದ ಕೆಲವು ನದಿಗಳ ಹೆಸರುಗಳು ಮತ್ತು ಅವುಗಳ ಉದ್ದವನ್ನು ಪಟ್ಟಿಯಲ್ಲಿ ಬರೆದಿರುವುದನ್ನು ನೋಡಿರಿ... ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.

| ನದಿಯ ಹೆಸರು | ನದಿಯ ಉದ್ದ (ಕಿ.ಮೀ.) |
|---|---|
| ಮಂಜೇಶ್ವರ ನದಿ | 16 |
| ವಳಪಟ್ಟಣಂ ನದಿ | 110 |
| ಚಾಲಿಯಾರ್ | 169 |
| ಭಾರತ ಹೊಳೆ | 209 |
| ಪೆರಿಯಾರ್ | 244 |
| ಪಂಬಯಾರ್ | 176 |
| ಅಚ್ಚನ್ ಕೋವಿಲಾರ್ | 128 |
| ನೆಯ್ಯಾರ್ | 56 |
| ಕಲ್ಲಡಯಾರ್ | 121 |

ಅತಿ ಹೆಚ್ಚು ಉದ್ದದ ನದಿ

ಅತಿ ಕಡಿಮೆ ಉದ್ದದ ನದಿ

ಚಾಲಿಯಾರ್ ನದಿಗಿಂತ ಉದ್ದವಾದ ಎಷ್ಟು ನದಿಗಳು ಪಟ್ಟಿಯಲ್ಲಿವೆ? ಉದ್ದಕ್ಕೆ ಅನುಗುಣವಾಗಿ ದೊಡ್ಡದರಿಂದ ಸಣ್ಣದರವರೆಗೆ ನದಿಗಳ ಹೆಸರುಗಳನ್ನು ಬರೆಯಿರಿ...

## ಮೌಲ್ಯಮಾಪನ ಚಟುವಟಿಕೆಗಳು

**1. ನಮೂನೆಯನ್ನು ಪೂರ್ತಿಗೊಳಿಸುವ**

11, 22, 33, 44, ____ , ____

150, 250, 350, ____ , ____

100, 101, 103, 106 ____ , ____

990, 980, 970, ____ , ____

ನನ್ನ ಸ್ವಂತ ನಮೂನೆಗಳು

____ , ____, ____, ____

____ , ____, ____, ____

____ , ____, ____, ____

____ , ____, ____, ____

**2. ನಾನು ಯಾರೆಂದು ಹೇಳುವಿರಾ...?**

ನಾನು

- ಎರಡಂಕೆಯ ಸಂಖ್ಯೆ
- 80 ಕ್ಕಿಂತ ಹೆಚ್ಚು.
- ಒಂದುಗಳ ಸ್ಥಾನದಲ್ಲಿರುವ ಅಂಕೆ ಹತ್ತುಗಳ ಸ್ಥಾನದಲ್ಲಿರುವ ಅಂಕೆಗಿಂತ 1 ಹೆಚ್ಚು.

ನಾನು ಯಾರು?

ನಾನು

- ಮೂರಂಕೆಯ ಸಂಖ್ಯೆ.
- ಅಂಕೆಗಳ ಮೊತ್ತ 15.
- ನೂರನೆಯ ಸ್ಥಾನದ ಅಂಕೆಯು ಒಂದುಗಳ ಸ್ಥಾನದ ಅಂಕೆಗಿಂತ 8 ಕಡಿಮೆ.

ನಾನು ಯಾರು?

ನಿಮ್ಮ ನೋಟ್ ಪುಸ್ತಕದಲ್ಲಿ ಈ ರೀತಿಯ ಒಂದು ಪ್ರಶ್ನೆಯನ್ನು ಬರೆಯಿರಿ. ಪ್ರಶ್ನೆಗಳನ್ನು ಗೆಳೆಯರೊಂದಿಗೆ ಹಂಚಿ ಉತ್ತರವನ್ನು ಕಂಡುಹಿಡಿಯಿರಿ.

## 3. ಶಾಲಾ ಸೊಸೈಟಿ

ಶಾಲಾ ಸೊಸೈಟಿಗೆ 950 ಪೆನ್ಸಿಲುಗಳ ಅಗತ್ಯವಿದೆ. ಮಿನ್ನ 7 ಪೆಟ್ಟಿಗೆ ಪೆನ್ಸಿಲ್ ಮತ್ತು 6 ಪ್ಯಾಕೆಟ್ ಪೆನ್ಸಿಲ್ ನೀಡಿದಳು. ಒಂದು ಪೆಟ್ಟಿಗೆಯಲ್ಲಿ 100 ಪೆನ್ಸಿಲುಗಳು ಮತ್ತು ಒಂದು ಪ್ಯಾಕೆಟಿನಲ್ಲಿ 10 ಪೆನ್ಸಿಲುಗಳಿವೆ. ಇನ್ನು ಎಷ್ಟು ಪೆನ್ಸಿಲುಗಳನ್ನು ಕೊಟ್ಟರೆ 950 ಆಗಬಹುದು?

ಕಂಡುಹಿಡಿದದ್ದು ಹೇಗೆ?

950 ಪೆನ್ಸಿಲುಗಳನ್ನು ಪೆಟ್ಟಿಗೆ ಮತ್ತು ಪ್ಯಾಕೆಟಿನಲ್ಲಿ ನೀಡುವುದಾದರೆ....?

ಪೆಟ್ಟಿಗೆಗಳ ಸಂಖ್ಯೆ

ಪ್ಯಾಕೆಟುಗಳ ಸಂಖ್ಯೆ

## 4. ಖಾಲಿಬಿಟ್ಟ ಉರುಟುಗಳನ್ನು ಪೂರ್ತಿಗೊಳಿಸಿರಿ.

| | | | | | |
|---|---|---|---|---|---|
| *i.* | 301 | 401 | 501 | | |
| *ii.* | 299 | 399 | 499 | | |
| *iii.* | 300 | 400 | 500 | | |

# 3

# ಸಾವಿರ... ಸಾವಿರ...




ST-515-5-MATHS (K)-3-VOL-1

# ಕ್ರೀಡಾಕೂಟ



ಪೂಮಲೆ ಕಾಡಿನಲ್ಲಿ ಕ್ರೀಡಾಕೂಟ ಜರುಗುತ್ತಿದೆ. ಸ್ಪರ್ಧೆಯಲ್ಲಿ ಭಾಗವಹಿಸುವ ಎಲ್ಲರೂ ಚೆಸ್ಟ್ ನಂಬರ್ ತೆಗೆದುಕೊಳ್ಳಬೇಕು. 986 ರಿಂದ ಮುಂದಿನ 15 ಸ್ಪರ್ಧಾಳುಗಳು ದೂರಜಿಗಿತ ಸ್ಪರ್ಧೆಗೆ ತಯಾರಾಗಿರಿ.

ದೂರ ಜಿಗಿತ ಸ್ಪರ್ಧೆಯಲ್ಲಿ ಭಾಗವಹಿಸುವವರ ಚೆಸ್ಟ್ ನಂಬರುಗಳನ್ನು ಬರೆಯಿರಿ.




| | | | | |
|---|---|---|---|---|
| **986** | | | | **990** |
| | | | | |
| | | | | |




ನಾನೂ ಇದ್ದೇನೆ...



ನಿನ್ನ ನಂಬರ್ 1001. ದೂರ ಜಿಗಿತ ಸ್ಪರ್ಧೆಯಲ್ಲಿ ನಿನ್ನ ಹೆಸರಿಲ್ಲ.



1000 ಕ್ಕೆ 1 ಸೇರಿದರೆ 1001.



ಚೆಸ್ಟ್ ನಂಬರುಗಳು ಕೆಳಗೆ ಬಿದ್ದು ಹೋಯಿತಲ್ಲ. ಅವುಗಳನ್ನು ಕ್ರಮೀಕರಿಸಿ ನೀಡುವಿರಾ?

1002, 1003, 1004, ......., ........, ........, ........, ........., ........., ........, 1012

## ಅನೌನ್ಸ್‌ಮೆಂಟ್

ಮಂಜಟ್ಟಿಕಾಯಿ ಹೆಕ್ಕುವ ಸ್ಪರ್ಧೆಯಲ್ಲಿ ಭಾಗವಹಿಸುವ ಸ್ಪರ್ಧಾಳುಗಳ ಚೆಸ್ಟ್ ನಂಬರುಗಳನ್ನು ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ. ಖಾಲಿ ಬಿಟ್ಟ ಕೋಣೆಗಳನ್ನು ಸರಿಯಾಗಿ ಪೂರ್ತಿಗೊಳಿಸಿದರೆ ಮಾತ್ರವೇ ಅನೌನ್ಸ್ ಮಾಡಲಾಗುವುದು. ನೀವು ಮಲ್ಲು ಆನೆಗೆ ಸಹಾಯ ಮಾಡುವಿರಾ?

| | |
|---|---|
| 879 | ಎಂಟು ನೂರ ಎಪ್ಪತ್ತೊಂಬತ್ತು |
| 904 | |
| 918 | |
| 906 | |
| 809 | |
| 749 | |



## ಎ.ಟಿ.ಎಂ.

ಟಿಟ್ಟು ಗಿಳಿಯು ಬಹುಮಾನಗಳನ್ನು ಪ್ರಾಯೋಜಿಸಿತು. ಬಹುಮಾನಗಳಿಗೆ ಒಟ್ಟು 760 ರೂಪಾಯಿಗಳಾದವು. ಟಿಟ್ಟುವು ಹಣ ತೆಗೆಯಲು ಎ.ಟಿ.ಎಂ.ನ ಬಳಿಗೆ ತಲುಪಿತು. ಕಾಡಿನ ಎ.ಟಿ.ಎಂ.ನಲ್ಲಿ 100 ರ, 10 ರ ಮತ್ತು 1 ರ ನೋಟುಗಳು ಮತ್ತು ನಾಣ್ಯಗಳು ಮಾತ್ರವೇ ಇರುವುದು. ಯಾವ ಯಾವ ನೋಟುಗಳು ಮತ್ತು ನಾಣ್ಯಗಳು ಲಭಿಸಿರಬಹುದು? ಎಷ್ಟರಂತೆ?



ನಾನು ಮಾಡಿದ ಲೆಕ್ಕ

## ಹಣ ಸಂಗ್ರಹಿಸುವ

ಕ್ರೀಡಾಕೂಟದಂದು ಆಹಾರಕ್ಕಾಗಿ ಹಣ ಸಂಗ್ರಹಿಸುವ ಜವಾಬ್ದಾರಿಯನ್ನು ನಾಲ್ಕು ಮಂದಿಗೆ ನೀಡಲಾಯಿತು. ಸಂಗ್ರಹಿಸಿದ ಮೊತ್ತವನ್ನು ಬರೆದಿರುವ ಪಟ್ಟಿಯನ್ನು ನೋಡಿರಿ.

| ಜವಾಬ್ದಾರಿ | 100 ರೂಪಾಯಿಯ ನೋಟುಗಳು | 10 ರೂಪಾಯಿಯ ನೋಟುಗಳು | 1 ರೂಪಾಯಿಯ ನಾಣ್ಯಗಳು | ಮೊತ್ತ |
|---|---|---|---|---|
|  | 9 | 8 | 3 | 983 |
|  | 7 | 14 | | |
|  | | | | 785 |
|  | | 10 | | 909 |

ಪಿಂಕು ಗಿಡುಗ 785 ರೂಪಾಯಿ ಸಂಗ್ರಹಿಸಿತು. ಈ ಮೊತ್ತ ಯಾವ ಯಾವ ರೀತಿಗಳಲ್ಲಿ ಆಗಿರಬಹುದು ಎಂದು ಕಾಡಿನ ಗೆಳೆಯರು ಆಲೋಚಿಸಿರುವುದನ್ನು ನೋಡಿರಿ.

| | | | |
|---|---|---|---|
|  | 7 ನೂರುಗಳು<br>........... ಹತ್ತುಗಳು<br>5 ಒಂದುಗಳು | ................. ಒಂದುಗಳು |  |
|  | 7 ನೂರುಗಳು<br>........... ಒಂದುಗಳು | 78 ........... 5........... |  |
|  | 700 + ........... + 5 | 70 ಹತ್ತುಗಳು<br>85 ........... |  |
|  | 6 ನೂರುಗಳು<br>........... ಹತ್ತುಗಳು<br>5 ಒಂದುಗಳು | 600 + ........... |  |

ಸುಂದರಿ ಗೂಬೆ ಸಂಗ್ರಹಿಸಿದ 909 ರೂಪಾಯಿಯನ್ನು ಯಾವ ಯಾವ ರೀತಿಗಳಲ್ಲಿ ಬರೆಯಬಹುದು? ನಿಮ್ಮ ನೋಟು ಪುಸ್ತಕದಲ್ಲಿ ಬರೆಯಿರಿ.

## ತಿನ್ನುವ ಸ್ಪರ್ಧೆ

ಮಲ್ಲು ಆನೆಯು ತಿನ್ನುವ ಸ್ಪರ್ಧೆಗಾಗಿ ಕಬ್ಬುಗಳನ್ನು ಕಟ್ಟುಗಳನ್ನಾಗಿ ಮಾಡುತ್ತಿದೆ. 100 ರಂತೆ ಕಬ್ಬುಗಳಿರುವ 20 ಕಟ್ಟುಗಳನ್ನಾಗಿ ಮಾಡಿತು. ಹಾಗಾದರೆ ಒಟ್ಟು ಎಷ್ಟು ಕಬ್ಬುಗಳಿವೆ?



ತಿನ್ನುವ ಸ್ಪರ್ಧೆ ನಡೆಯುವ ಸ್ಥಳಕ್ಕೆ ಕಬ್ಬುಗಳನ್ನು ಕೊಂಡೊಯ್ಯಲು ಜಿಂಬು ಜಿರಾಫೆ, ಬಾಲು ಕರಡಿ ಮತ್ತು ಡಿಂಕು ಕತ್ತೆ ಒಪ್ಪಿದವು. ಪ್ರತಿಯೊಬ್ಬರು ಕೊಂಡುಹೋದ ಕಬ್ಬುಗಳೆಷ್ಟು?

| | ಕಬ್ಬಿನ ಕಟ್ಟುಗಳ ಸಂಖ್ಯೆ | ಕಬ್ಬುಗಳ ಸಂಖ್ಯೆ |
|---|---|---|
|  | **6** | |
|  | **10** | |
|  | | |

ತಿನ್ನುವ ಸ್ಪರ್ಧೆಗಾಗಿ ತಂದ 2000 ಮಾವಿನ ಹಣ್ಣುಗಳನ್ನು 4 ಗೋಣಿ ಚೀಲಗಳಲ್ಲಿ ಸಮಾನವಾಗಿ ತುಂಬಿಸಲಾಗಿದೆ. ಪ್ರತಿಯೊಂದು ಗೋಣಿ ಚೀಲದಲ್ಲಿ ಎಷ್ಟರಂತೆ ಮಾವಿನ ಹಣ್ಣುಗಳಿವೆ?

   

## ನೀರು ಕುಡಿಯುವ ಸ್ಪರ್ಧೆ


ನೀರು ಕುಡಿಯುವ ಸ್ಪರ್ಧೆಗೆ ಹೆಸರು
ನೋಂದಾಯಿಸಿದವರು ಆದಷ್ಟು
ಬೇಗನೆ ಬನ್ನಿರಿ.




50


50


50 ಲೀಟರ್, 20 ಲೀಟರ್ ಮತ್ತು
10 ಲೀಟರಿನಂತೆ ನೀರನ್ನು
ಪಾತ್ರೆಗಳಲ್ಲಿ ತುಂಬಿಸಲಾಗಿದೆ. ಅತಿ
ಹೆಚ್ಚು ನೀರು ಕುಡಿಯುವವರು
ಗೆಲ್ಲುವರು.


20


20


20


20


10


10

ಪ್ರತಿಯೊಬ್ಬರು ಕುಡಿದ ನೀರಿನ ಅಳತೆಯನ್ನು ನೋಡಿರಿ.
ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಹೆಸರು | ನೀರಿನ ಅಳತೆ | | | ಒಟ್ಟು (ಲೀಟರ್‌ಗಳಲ್ಲಿ) |
|---|---|---|---|---|
| | 50 ಲೀಟರ್ | 20 ಲೀಟರ್ | 10 ಲೀಟರ್ | |
| ಜಿಂಬು ಜಿರಾಫೆ | 1 | 3 | 1 | |
| ಮಲ್ಲು ಆನೆ | 3 | 4 | 2 | |
| ಚಿಂಟು ಕರಡಿ | | 2 | 2 | |
| ಕಿಟ್ಟು ಒಂಟೆ | | 5 | 10 | |
| ಚಿಂಪು ಚಿರತೆ | | | | 80 |
| ಚಿಲ್ಲು ಕಾಡುಕೋಣ | | | | 100 |

ಗೆದ್ದದ್ದು ಯಾರು?

50 ಲೀಟರಿನ 2 ಪಾತ್ರೆಯಲ್ಲಿರುವ ನೀರನ್ನು ಕುಡಿಯುವುದರ ಬದಲು 20 ಲೀಟರಿನ ಎಷ್ಟು ಪಾತ್ರೆಗಳಲ್ಲಿರುವ ನೀರನ್ನು ಕುಡಿಯಬೇಕು?

10 ಲೀಟರಿನ ಪಾತ್ರೆಯ ನೀರಾದರೆ...?



ಬೇಸಗೆ ಕಾಲದಲ್ಲಿ ನೀರಿನ ಕೊರತೆ ಉಂಟಾಗುತ್ತದೆ ಎಂದು ತಿಳಿದಿದೆಯಲ್ಲವೇ.... ನೀರನ್ನು ಪೋಲು ಮಾಡದೆ ಉಪಯೋಗಿಸಬೇಕು.

ಪ್ರತಿಯೊಬ್ಬರು ಕುಡಿದ ನೀರಿನ ಲೀಟರಿನಲ್ಲಿರುವ ಅಳತೆಯನ್ನು ಆರೋಹಣ ಕ್ರಮದಲ್ಲಿ ಬರೆಯಿರಿ.

## ಬಹುಮಾನ ಕೂಪನ್




ಕ್ರೀಡಾಕೂಟದಲ್ಲಿ ಮೊದಲ ಮೂರು ಸ್ಥಾನಗಳನ್ನು ಪಡೆದವರಿಗೆ 'ಕಂಗಾರು ಸ್ಪೋರ್ಟ್ಸ್'ನವರು 900 ರೂಪಾಯಿ ಮೌಲ್ಯದ ಬಹುಮಾನ ಕೂಪನುಗಳನ್ನು ನೀಡಿದರು. ಪ್ರತಿಯೊಬ್ಬರೂ ಮೂರು ಮೂರು ವಸ್ತುಗಳನ್ನು ಆಯ್ಕೆ ಮಾಡಬಹುದು.
ಯಾವ ಯಾವ ವಸ್ತುಗಳನ್ನು ಅವರು ಆಯ್ಕೆ ಮಾಡಿರಬಹುದು?

| ವಸ್ತುಗಳು | ಬೆಲೆ (ರೂಪಾಯಿಗಳಲ್ಲಿ) |
|---|---|
| ಕ್ರಿಕೆಟ್ ಬ್ಯಾಟ್ | 750 |
| ಶಟಲ್ ಬ್ಯಾಟ್ | 300 |
| ಫುಟ್ಬಾಲ್ | 650 |
| ಶಟಲ್ ಕೋಕ್ | 250 |
| ನೆಟ್ | 400 |
| ವಾಲಿಬಾಲ್ | 350 |

| ವಸ್ತುಗಳು | ಬೆಲೆ (ರೂಪಾಯಿಗಳಲ್ಲಿ) |
|---|---|
| ಶೂಸ್ | 600 |
| ಜರ್ಸಿ | 200 |
| ಗ್ಲೌಸ್ | 150 |
| ಚೆಸ್ ಬೋರ್ಡ್ | 100 |
| ಕ್ರಿಕೆಟ್ ಬಾಲ್ | 50 |

| | ಆಯ್ಕೆ ಮಾಡಿದ ವಸ್ತುಗಳು | ಬೆಲೆ |
|---|---|---|
|  | | |
| | | |
| | | |
|  | | |
| | | |
| | | |
|  | | |
| | | |
| | | |

## ಮಕ್ಕಳ ಸ್ಪರ್ಧೆ

ಮಿಟ್ಟು ಮೊಲವು ಮಕ್ಕಳ ಸ್ಪರ್ಧೆಗಾಗಿ ಚೆಸ್ಟ್ ನಂಬರುಗಳನ್ನು ತಯಾರಿಸುತ್ತಿದೆ.

- 100 ಮೀಟರ್ ಓಟ ಸ್ಪರ್ಧೆಗಾಗಿ 10 ರಿಂದ 20 ರವರೆಗೆ ಇರುವ ಚೆಸ್ಟ್ ನಂಬರುಗಳನ್ನು ತಯಾರಿಸಿತು. ಚೆಸ್ಟ್ ನಂಬರುಗಳನ್ನು ಬರೆದ ಎಷ್ಟು ಕಾರ್ಡುಗಳಿವೆ?
- ಈಜು ಸ್ಪರ್ಧೆಗಾಗಿ 30 ರಿಂದ 50 ರ ವರೆಗಿನ ಕಾರ್ಡುಗಳನ್ನು ತಯಾರಿಸಿತು. ಹಾಗಾದರೆ ಎಷ್ಟು ಮಂದಿಗೆ ಕಾರ್ಡುಗಳನ್ನು ನೀಡಲಾಯಿತು?
- ನೆಲ್ಲಿಕಾಯಿ ಹೆಕ್ಕುವ ಸ್ಪರ್ಧೆಗಾಗಿ 60 ರಿಂದ 100 ರ ವರೆಗಿನ ಕಾರ್ಡುಗಳನ್ನು ತಯಾರಿಸಬೇಕು. ಎಷ್ಟು ಕಾರ್ಡುಗಳು ಬೇಕಾಗಬಹುದು?

ನಾನು ಮಾಡಿದ ರೀತಿ

- ಒಟ್ಟು ಎರಡಂಕೆ ಸಂಖ್ಯೆಗಳು ಎಷ್ಟು?
- 100 ರಿಂದ 200 ರ ವರೆಗೆ ಎಷ್ಟು ಸಂಖ್ಯೆಗಳಿವೆ?
- ಒಟ್ಟು ಎಷ್ಟು ಮೂರಂಕೆ ಸಂಖ್ಯೆಗಳಿವೆ?
- 1 ರಿಂದ 100 ರ ವರೆಗೆ ಎಷ್ಟು ವಿಷಮ ಸಂಖ್ಯೆಗಳಿವೆ?
- 1 ರಿಂದ 100 ರ ವರೆಗೆ ಎಷ್ಟು ಸಮ ಸಂಖ್ಯೆಗಳಿವೆ?

ನಾನು ಲೆಕ್ಕ ಮಾಡಿದ ರೀತಿ

ಬೇರೆ ಯಾವುದಾದರೂ ರೀತಿಗಳಿವೆಯೇ?

## ಕಾರ್ಡುಗಳ ಆಟ






ಪ್ರತಿಯೊಬ್ಬರಿಗೂ 4 ಕಾರ್ಡುಗಳಂತೆ ನೀಡಲಾಗುವುದು. ಅಂಕೆಗಳು ಆವರ್ತಿಸದೆ ಅತಿ ಹೆಚ್ಚು ಮೂರಂಕೆ ಸಂಖ್ಯೆಗಳನ್ನು ಬರೆಯುವವರು ಆಟದಲ್ಲಿ ಗೆಲ್ಲುವರು.

ಮಣಿ ಇರುವೆಗೆ ಸಿಕ್ಕಿದ ಕಾರ್ಡುಗಳನ್ನು ನೋಡಿರಿ.

| | | | |
|---|---|---|---|
| 9 | 3 | 2 | 5 |

ಯಾವ ಯಾವ ಮೂರಂಕೆ ಸಂಖ್ಯೆಗಳನ್ನು ಬರೆದಿರಬಹುದು?

ಬರೆದಿರುವ ಅತಿ ದೊಡ್ಡ ಸಂಖ್ಯೆ

ಅತಿ ಸಣ್ಣ ಸಂಖ್ಯೆ

ಅತಿ ಸಣ್ಣ ಸಂಖ್ಯೆಯನ್ನು ಅಬಾಕಸ್ ನಲ್ಲಿ ಚಿತ್ರಿಸಿರಿ.



ಅನುಕ್ರಮವಾಗಿ ಬರುವ ಎರಡು ಸಂಖ್ಯೆಗಳ ಮೊತ್ತದ ವಿಶೇಷತೆಯೇನು?

1 + 2,   2 + 3, ...   5 + 6,   6 + 7, ...

ಇನ್ನೂ ಹೆಚ್ಚು ಉದಾಹರಣೆಗಳನ್ನು ಬರೆದು ವಿಶೇಷತೆಯನ್ನು ಕಂಡುಹಿಡಿಯಿರಿ.

- ಎರಡು ವಿಷಮ ಸಂಖ್ಯೆಗಳ ಮೊತ್ತದ ವಿಶೇಷತೆಯೇನು?
- ಎರಡು ಸಮ ಸಂಖ್ಯೆಗಳ ಮೊತ್ತವೋ?
- 6, 60 ಮತ್ತು 600 ಸೇರಿದರೆ ಎಷ್ಟು?
- 8 ನೂರುಗಳು ಸೇರಿದ ಸಂಖ್ಯೆಯು ಎಷ್ಟು ಹತ್ತುಗಳು ಸೇರಿದ ಸಂಖ್ಯೆಗೆ ಸಮಾನವಾಗಿದೆ?

## ಮೌಲ್ಯಮಾಪನ ಚಟುವಟಿಕೆಗಳು

**1.** 7 ನೂರುಗಳು, 6 ಹತ್ತುಗಳು, 5 ಒಂದುಗಳನ್ನು ಸೇರಿಸಿ 675 ಎಂದು ಬರೆದರು. ಸರಿಯಾದ ಸಂಖ್ಯೆ ಯಾವುದು? 675ರೊಂದಿಗೆ ಎಷ್ಟು ಹತ್ತುಗಳನ್ನು ಸೇರಿಸಿದರೆ ಸರಿಯಾದ ಸಂಖ್ಯೆ ಸಿಗುವುದು?

**2.** ಅಬಾಕಸ್ ನಲ್ಲಿರುವ 100 ರ ಸ್ಥಾನದ ಮಣಿಗಳಿಂದ ಒಂದು ಮಣಿಯನ್ನು ತೆಗೆದು ಹತ್ತರ ಸ್ಥಾನದಲ್ಲಿ ಇರಿಸಿದರೆ ಸಂಖ್ಯೆ ಎಷ್ಟು ಕಡಿಮೆಯಾಗುತ್ತದೆ?

ಈಗ ಇರುವ ಸಂಖ್ಯೆ

ಮಣಿಯನ್ನು ಬದಲಾಯಿಸಿದಾಗ ಸಿಕ್ಕಿದ ಸಂಖ್ಯೆ




100 ರ ಸ್ಥಾನದ ಮಣಿಗಳಿಂದ ಒಂದು ಮಣಿಯನ್ನು ತೆಗೆದು ಒಂದುಗಳ ಸ್ಥಾನದಲ್ಲಿ ಇರಿಸಿದರೆ ಸಂಖ್ಯೆ ಎಷ್ಟು ಕಡಿಮೆಯಾಗುತ್ತದೆ?

ಅಬಾಕಸ್ ನಲ್ಲಿ ಈಗ ಇರುವ ಮಣಿಗಳನ್ನು ಮಾತ್ರ ಉಪಯೋಗಿಸಿ ಮಾಡಬಹುದಾದ

ಅತಿ ದೊಡ್ಡ ಮೂರಂಕೆ ಸಂಖ್ಯೆ ☐

ಅತಿ ಸಣ್ಣ ಮೂರಂಕೆ ಸಂಖ್ಯೆ ☐

**3.** ನಮೂನೆ ಪೂರ್ತಿಗೊಳಿಸಿರಿ.

- 596, 597, 598, …….., ……..
- 102, 112, 122, …….., ……..
- 123, 234, 345, …….., ……..
- 986, 886, 786, …….., ……..
- 900, 890, 880, …….., ……..
-

**4.** ಕೋಣೆಗಳನ್ನು ಪೂರ್ತಿಗೊಳಿಸಿರಿ.

789

- ☐
- 789 ಒಂದುಗಳು
- 78 ಹತ್ತುಗಳು 9 ಒಂದುಗಳು
- ☐

# 4

# ಒಟ್ಟು ಸೇರುವ



# ಗಣಿತೋತ್ಸವ







## ಸ್ಟಾಲ್ - 1
## ಮೊತ್ತ ಕಂಡುಹಿಡಿಯಿರಿ... ಬಣ್ಣ ಹಚ್ಚಿರಿ...

ಪೆಟ್ಟಿಗೆಯಿಂದ ಎರಡು ಕಾರ್ಡುಗಳನ್ನು ತೆಗೆಯಿರಿ...
ಮೊತ್ತ ಕಂಡುಹಿಡಿಯಿರಿ... ಹೂವಿಗೆ ಬಣ್ಣ ಹಚ್ಚಿರಿ...






ನನಗೆ ಸಿಕ್ಕಿದ್ದು



## ಜೊತೆಗೊಳಿಸಿರಿ

| ಜೋಡಿ | ಮೊತ್ತ |
|---|---|
| 1 + 9 | 10 |
| ........ + ........ | 10 |
| ........ + ........ | 10 |
| ........ + ........ | 10 |
| ........ + ........ | 10 |

| ಜೋಡಿ | ಮೊತ್ತ |
|---|---|
| 1 + ........ | 100 |
| ........ + 65 | 100 |
| 60 + ........ | 100 |
| 70 + ........ | 100 |
| ........ + 45 | 100 |




100 ಮೊತ್ತವಾಗಿ ಬರುವ ಜೋಡಿಗಳು ಇನ್ನೂ ಇವೆಯಲ್ಲವೇ... ಕಂಡುಹಿಡಿಯಬಹುದೇ?

ನಾನು ಕಂಡುಹಿಡಿದದ್ದು

49 + 51 = 100
48 + 52 = 100
100 ಮೊತ್ತವಾಗಿ ಬರುವ ಎಲ್ಲಾ ಜೋಡಿಗಳನ್ನು ಸುಲಭವಾಗಿ ಕಂಡು ಹಿಡಿಯಲು ಸಾಧ್ಯವಿದೆಯಲ್ಲವೇ?



ಒಂದು ಜೋಡಿಯಾಗಲು ಎರಡು ಸಂಖ್ಯೆಗಳು ಬೇಕು. 80 ಮತ್ತು 20 ಎಂಬುದು 100 ಮೊತ್ತವಾಗಿ ಬರುವ ಒಂದು ಜೋಡಿ ಸಂಖ್ಯೆಯಾಗಿದೆಯಲ್ಲವೇ?

100 ಮೊತ್ತವಾಗಿ ಬರುವ ಎಲ್ಲಾ ಜೋಡಿಗಳನ್ನು ಪರಸ್ಪರ ಜೋಡಿಸಿರಿ.

40 41 42 43 44 45 46 47 48 49 50 51 52 53 54 55 56 57 58 59

ಸಾವಿರದ ಜೋಡಿಗಳು

50 + 950 = 1000
150 + 850 = ☐
250 + ☐ = 1000
☐ + 650 = 1000
450 + ☐ = 1000

## ಸ್ಟಾಲ್ - 2

# ಬಟ್ಟೆಯಂಗಡಿ




500 ರೂಪಾಯಿಗಳಿಂದ ಯಾವ ಎರಡು ಬಟ್ಟೆಗಳನ್ನು ಖರೀದಿಸಬಹುದು?

ಬೆಲೆಯನ್ನು ನೋಡಿ ನೀವೂ ಲೆಕ್ಕ ಮಾಡಿರಿ.

ಬಿಲ್ 1

| ವಸ್ತು | ಬೆಲೆ (ರೂಪಾಯಿಗಳಲ್ಲಿ) |
|---|---|
| ........ | ........ |
| ........ | ........ |
| ಒಟ್ಟು | 500 |

ಬಿಲ್ 2

| ವಸ್ತು | ಬೆಲೆ (ರೂಪಾಯಿಗಳಲ್ಲಿ) |
|---|---|
| ........ | ........ |
| ........ | ........ |
| ಒಟ್ಟು | 500 |

## ಸ್ಟಾಲ್ - 3
## ಸಂಖ್ಯಾ ಸೌಂದರ್ಯ

| | |
|---|---|
| 1 | 3 |
| 2 | |

ಈ ಅಂಕೆಗಳನ್ನು ಒಂದು ಸಲ ಉಪಯೋಗಿಸಿ ಬರೆಯಬಹುದಾದ ಸಂಖ್ಯೆಗಳು ಯಾವುವು? ಇದರಲ್ಲಿ ಅತಿ ದೊಡ್ಡ ಸಂಖ್ಯೆ ಯಾವುದು? ಅತಿ ಸಣ್ಣ ಸಂಖ್ಯೆ ಯಾವುದು? ಎರಡು ಸಂಖ್ಯೆಗಳನ್ನು ಕೂಡಿಸಿದರೆ ಎಷ್ಟು ಮೊತ್ತ ಸಿಗಬಹುದು?

ನನಗೆ ಸಿಕ್ಕಿದ ಸಂಖ್ಯೆಗಳು

ನನಗೆ ಸಿಕ್ಕಿದ ದೊಡ್ಡ ಸಂಖ್ಯೆ ______ ಸಣ್ಣ ಸಂಖ್ಯೆ ______

**ಮೊತ್ತ**

ನನ್ನ ಊಹೆ ______ ಮತ್ತು ______ ನ ನಡುವಿನಲ್ಲಿ

ಕೂಡಿಸಿದಾಗ ಸಿಕ್ಕಿದ ಸಂಖ್ಯೆ ______

2, 3, 4 ಎಂಬೀ ಸಂಖ್ಯೆಗಳನ್ನು ಉಪಯೋಗಿಸಿದರೆ?

ದೊಡ್ಡ ಸಂಖ್ಯೆ ______

ಸಣ್ಣ ಸಂಖ್ಯೆ ______

ಕೂಡಿಸಿದಾಗ ಸಿಕ್ಕಿದ ಸಂಖ್ಯೆ ______

3, 4, 5 ಎಂಬೀ ಸಂಖ್ಯೆಗಳನ್ನು ಉಪಯೋಗಿಸಿ ಬರೆದರೆ?

ದೊಡ್ಡ ಸಂಖ್ಯೆ ______

ಸಣ್ಣ ಸಂಖ್ಯೆ ______

ಕೂಡಿಸಿದಾಗ ಸಿಕ್ಕಿದ ಸಂಖ್ಯೆ ______

ST-515-7-MATHS (K)-3-VOL-1

ಸಿಕ್ಕಿದ ಮೊತ್ತದ ಅಂಕೆಗಳ ವಿಶೇಷತೆ

ಕ್ರಿಯೆ ಮಾಡದೆಯೇ ಉತ್ತರವನ್ನು ಬರೆಯಿರಿ... ಕಂಡುಹಿಡಿದ ರೀತಿಯನ್ನು ಹೇಳಿರಿ...

| | | |
|---|---|---|
| 310 + 230 | = | 540 |
| 317 + 230 | = | |
| 315 + 231 | = | |
| 308 + 232 | = | |

## ಸ್ಟಾಲ್ - 4

## ಒಟ್ಟು ಸೇರುವ ..... ಆಟ ಆಡುವ ...

ಸ್ವಾಗತ !

ಬಂದಿರುವ ಎಲ್ಲರಿಗೂ ಉಡುಗೊರೆ ನೀಡಲಾಗುವುದು.




ಬಿಬಿಗೆ ಮತ್ತು ಜೆಬಿಗೆ ಸಿಕ್ಕಿದ ನೋಟುಗಳು

| ನೋಟುಗಳು/ ನಾಣ್ಯಗಳು | ಬಿಬಿಗೆ ಸಿಕ್ಕಿರುವುದು | | ಜೆಬಿಗೆ ಸಿಕ್ಕಿರುವುದು | |
|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 200 | 2 | | 0 | |
| 100 | 0 | | 2 | |
| 50 | 4 | | 0 | |
| 20 | 3 | | 0 | |
| 10 | 4 | | 5 | |
| 5 | 0 | | 2 | |
| | ಒಟ್ಟು | | ಒಟ್ಟು | |

ಬಿಬಿಗೆ ಸಿಕ್ಕಿದ್ದು [ ] ಜೆಬಿಗೆ ಸಿಕ್ಕಿದ್ದು [ ]

ಒಟ್ಟು [ ]

1000 ರೂಪಾಯಿಯಾಗಲು ಇನ್ನೆಷ್ಟು ಬೇಕು? [ ]

ನೀವೂ ಆಟ ಆಡಿರಿ... ಪಟ್ಟಿ ಮಾಡಿ ಮೊತ್ತ ಕಂಡುಹಿಡಿಯಿರಿ.

ನೋಟ್ ಪುಸ್ತಕದಲ್ಲಿ ಬರೆಯಿರಿ.




## ಸ್ಟಾಲ್ - 5
## ಆಡುವ... ಆನಂದಿಸುವ...

| | | | |
|---|---|---|---|
| 312 | 146 | 205 | 320 |
| 148 | 237 | 419 | 400 |
| 315 | 236 | 226 | 145 |
| 536 | 325 | 200 | 130 |

ಸಿಕ್ಕಿದ ಸಂಖ್ಯೆಗಳು : 237, 146




ಮೊದಲ ಸಲ ಟೋಕನ್ ಎಸೆದಾಗ ಬಿಬಿಗೆ ಮತ್ತು ಜೆಬಿಗೆ ಒಂದೇ ಸಂಖ್ಯೆಗಳು ಸಿಕ್ಕಿದವು. ಇಬ್ಬರೂ ಉತ್ತರ ಕಂಡುಹಿಡಿದ ರೀತಿಯನ್ನು ನೋಡಿರಿ.

**ಬಿಬಿ ಮಾಡಿದ ರೀತಿ**

$$\begin{aligned}237 + 146 &= 200 + 30 + 7 + 100 + 40 + 6\\ &= 200 + 100 + 30 + 40 + 7 + 6\\ &= 300 + 70 + 13\\ &= 300 + 83\\ &= 383\end{aligned}$$

**ಜೆಬಿ ಮಾಡಿದ ರೀತಿ**

$$\begin{aligned}237 &= 230 + 7\\ 146 &= 140 + 6\\ 237 + 146 &= 370 + 13 = 383\end{aligned}$$

| ನೂರುಗಳು | ಹತ್ತುಗಳು | ಒಂದುಗಳು |
|---|---|---|
| 2 | 3 | 7 + |
| 1 | 4 | 6 |
| | 1 | |
| 3 | 8 | 3 |

7 ಮತ್ತು 6ನ್ನು ಕೂಡಿಸಿದಾಗ 13 ಸಿಕ್ಕಿತು. 13 ರ 10 ನ್ನು ಹತ್ತುಗಳ ಸ್ಥಾನಕ್ಕೆ ಸೇರಿಸಲಾಯಿತು.

237 ಮತ್ತು 146ನ್ನು ಕೂಡಿಸಿದರೆ 383 ಸಿಗುವುದು. 236 ಮತ್ತು 148ನ್ನು ಕೂಡಿಸಿದರೆ ಎಷ್ಟು ಸಿಗಬಹುದು? ಬಾಯಿ ಲೆಕ್ಕ ಮಾಡಿ ಹೇಳಿರಿ.

ಮಿನ್ನಳಿಗೆ 536 ಮತ್ತು 325 ಎಂಬೀ ಸಂಖ್ಯೆಗಳು ಸಿಕ್ಕಿದವು. ಮೊತ್ತ ಕಂಡುಹಿಡಿದ ರೀತಿಯನ್ನು ನೋಡಿರಿ.

$$536 = 500 + 30 + 6$$
$$325 = 300 + 20 + 5$$
$$536 + 325 = 800 + 50 + 11 = 861$$

```
 536 +
 300
 ----
 836 +
  20
 ----
 856 +
   5
 ----
 861
```

ನಾವೂ ಟೋಕನ್ ಎಸೆದು ಆಡುವ.

ಒಬ್ಬರು ಎರಡು ಸಲ ಎಸೆಯಬಹುದು.
ಪ್ರತಿ ಸಲ ಸಿಕ್ಕಿದ ಸಂಖ್ಯೆಗಳ ಮೊತ್ತವನ್ನು ಕಂಡುಹಿಡಿಯಿರಿ.

ನನಗೆ ಸಿಕ್ಕಿದ ಸಂಖ್ಯೆಗಳು

ಒಂದನೇ ಆಟ :

ಎರಡನೇ ಆಟ :

ಮೊತ್ತ ಕಂಡುಹಿಡಿದ ರೀತಿ

ಮೊತ್ತ ಕಂಡುಹಿಡಿದ ರೀತಿ

## ದೊಡ್ಡಣ್ಣ ಯಾರು?

| | | | |
|---|---|---|---|
| | | | |
| | 590 | | |
| | | 164 | |
| 199 | 146 | 99 | 65 |



164 ಸಿಕ್ಕಿರುವುದು ಹೇಗೆ?



199 ಕ್ಕೆ 1ನ್ನು ಕೂಡಿಸಿದರೆ ದೊಡ್ಡಣ್ಣನ ಸ್ಥಾನದಲ್ಲಿ ಉಂಟಾಗುವ ಬದಲಾವಣೆ ಏನು? ಕ್ರಿಯೆ ಮಾಡದೆ ಉತ್ತರ ಹೇಳಿರಿ.



146 ಕ್ಕೆ 1ನ್ನು ಕೂಡಿಸಿ ನೋಡಿರಿ. ದೊಡ್ಡಣ್ಣನ ಸ್ಥಾನದಲ್ಲಿ ಎಷ್ಟಿರಬಹುದು? ಕ್ರಿಯೆ ಮಾಡದೆ ಹೇಳಿರಿ.



199 ಕ್ಕೆ 2ನ್ನು ಕೂಡಿಸಿ ನೋಡಿರಿ. ದೊಡ್ಡಣ್ಣನ ಸ್ಥಾನದಲ್ಲಿ ಎಷ್ಟಿರಬಹುದು? ಕೆಳಗಿರುವ 4 ಸಂಖ್ಯೆಗಳಿಗೆ 1 ರಂತೆ ಕೂಡಿಸಿದರೆ ದೊಡ್ಡಣ್ಣನ ಸ್ಥಾನದಲ್ಲಿ ಎಷ್ಟು ಹೆಚ್ಚಾಗುವುದು?

ಲೆಕ್ಕ ಮಾಡಿದ್ದು ಹೇಗೆಂದು ಹೇಳಿರಿ.

## ಸ್ಟಾಲ್ - 6
# ಸಂಖ್ಯೆಗಳ ಅದ್ಭುತ ಲೋಕ

| | | |
|---|---|---|
| 8 | 1 | 6 |
| 3 | | 7 |
| | 9 | 2 |

ಮೊದಲ ಅಡ್ಡಸಾಲಿನ ಕೋಣೆಗಳಲ್ಲಿರುವ ಸಂಖ್ಯೆಗಳನ್ನು ಕೂಡಿಸಿ ನೋಡಿರಿ. ಒಟ್ಟು ಮೊತ್ತ ಸಿಗುವ ರೀತಿಯಲ್ಲಿ ಉಳಿದ ಅಡ್ಡ ಸಾಲಿನಲ್ಲಿರುವ ಕೋಣೆಗಳನ್ನು ಪೂರ್ತಿಗೊಳಿಸಿರಿ...

ಪ್ರತಿಯೊಂದು ನೀಟ ಸಾಲಿನ ಕೋಣೆಗಳಲ್ಲಿರುವ ಮೂರು ಸಂಖ್ಯೆಗಳನ್ನು ಕೂಡಿಸಿ ನೋಡಿರಿ. ಮೂಲೆಯಿಂದ ಮೂಲೆಗೆ ಇರುವ ಕೋಣೆಗಳಲ್ಲಿನ ಸಂಖ್ಯೆಗಳನ್ನೂ ಕೂಡಿಸಿ ನೋಡಿರಿ. ಸಿಗುವ ಮೊತ್ತದ ವಿಶೇಷತೆ ಏನೆಂದು ಹೇಳಿರಿ.

**ಮಾಯಾ ಚೌಕ**

ಚೌಕದೊಳಗಿನ ಸಂಖ್ಯೆಗಳನ್ನು ಅಡ್ಡಕ್ಕೂ ನೀಟಕ್ಕೂ ಮೂಲೆಯಿಂದ ಮೂಲೆಗೂ ಕೂಡಿಸಿದಾಗ ಸಿಗುವ ಸಂಖ್ಯೆಗಳ ಮೊತ್ತವು ಸಮಾನವಾಗಿರುವುದು.

23 ರಿಂದ ಆರಂಭಿಸಿ 31 ರ ವರೆಗಿನ ಸಂಖ್ಯೆಗಳನ್ನು ಬರೆದು ಮಾಯಾ ಚೌಕವನ್ನು ಪೂರ್ತಿಗೊಳಿಸಿರಿ...

| | | |
|---|---|---|
| | 23 | |
| 25 | | |
| 26 | 31 | 24 |

ಇವುಗಳಲ್ಲಿ ನಿಮಗೆ ಯಾವುದು ಸುಲಭವಾಗಿ ತೋರಿತು?

| | |
|---|---|
| 26 + <br> 31 <br> ☐☐ + <br> 24 <br> ☐☐ | 26 + <br> 31 + <br> 24 <br> ☐☐ |

ಪ್ರತಿಯೊಂದು ಜೋಡಿಗಳಲ್ಲೂ ದೊಡ್ಡ ಮೊತ್ತ ಯಾವುದೆಂದು ಗೆಳೆಯರಲ್ಲಿ ಹೇಳಿರಿ.

1. 56 + 75
   65 + 57
2. 64 + 58
   46 + 85

## ಅರವಟ್ಟಿಗೆ



ಗಣಿತೋತ್ಸವದ ನಾಲ್ಕು ದಿನಗಳಲ್ಲಿ ವಿತರಣೆ ಮಾಡಿದ ಕುಡಿಯುವ ನೀರಿನ ಅಳತೆಯನ್ನು ನೋಡಿರಿ...

| ದಿನ | ಅಳತೆ (ಲೀಟರಿನಲ್ಲಿ) |
|---|---|
| 1 | 437 |
| 2 | 524 |
| 3 | 581 |
| 4 | 448 |

- ಒಂದು ಮತ್ತು ಎರಡನೇ ದಿನಗಳಲ್ಲಾಗಿ ವಿತರಣೆ ಮಾಡಿದ ನೀರಿನ ಒಟ್ಟು ಅಳತೆ.
  ☐ ಲೀಟರ್
- ಮೂರು ಮತ್ತು ನಾಲ್ಕನೇ ದಿನಗಳಲ್ಲಾಗಿ ವಿತರಣೆ ಮಾಡಿದ ನೀರಿನ ಒಟ್ಟು ಅಳತೆ.
  ☐ ಲೀಟರ್
- ನಾಲ್ಕೂ ದಿನಗಳಲ್ಲಿ ಒಟ್ಟು ಎಷ್ಟು ಲೀಟರ್ ನೀರು ಉಪಯೋಗಿಸಲಾಯಿತು?

### ಬಾಯಿಲೆಕ್ಕ ಮಾಡಿರಿ

ಪ್ರತಿಯೊಂದು ದಿವಸವೂ ಉಪಯೋಗಿಸಿದ ನೀರಿನ ಅಳತೆ 440, 520, 580, 450 ಲೀಟರ್ ಆಗಿದ್ದರೆ ಒಟ್ಟು ಎಷ್ಟು ಲೀಟರ್ ನೀರು ಬೇಕಾಗುತ್ತಿತ್ತು?
ಬಾಯಿಲೆಕ್ಕ ಮಾಡಿರಿ...

- ಗಣಿತೋತ್ಸವ ಪ್ರದರ್ಶನವನ್ನು ನೋಡುವುದಕ್ಕಾಗಿ ಕದಿರಣಿ ಶಾಲೆಯಿಂದ 281 ಮಕ್ಕಳು ಮತ್ತು ಅರಣಿ ಶಾಲೆಯಿಂದ 348 ಮಕ್ಕಳು ಬಂದರು. ಹಾಗಾದರೆ ಗಣಿತ ಪ್ರದರ್ಶನವನ್ನು ನೋಡಲು ಬಂದ ಮಕ್ಕಳ ಒಟ್ಟು ಸಂಖ್ಯೆ ಎಷ್ಟು?

# ಸ್ಟಾಲ್ - 7
## ನಮೂನೆಗಳ ಲೋಕ

ಗಣಿತ ಪ್ರದರ್ಶನದ ಹಾಲ್‌ನ ಗೋಡೆಯಲ್ಲಿ ನಿಮಗೂ ನಮೂನೆಗಳನ್ನು ಬರೆಯಬಹುದು.

**ನಮೂನೆಗಳನ್ನು ಪೂರ್ತಿಗೊಳಿಸಿರಿ.**

| | | | | |
|---|---|---|---|---|
| 111 | + | 111 | = | 222 |
| 222 | + | 222 | = | |
| | + | | = | |
| | + | | = | |
| | + | | = | |
| | + | | = | |
| | + | | = | |
| | + | | = | |
| 999 | + | 999 | = | |

| | | | | | | |
|---|---|---|---|---|---|---|
| 100 | + | 10 | + | 1 | = | 111 |
| 200 | + | 20 | + | 2 | = | 222 |
| | + | | + | | = | |
| | + | | + | | = | |
| | + | | + | | = | |
| | + | | + | | = | |
| | + | | + | | = | |
| | + | | + | | = | |
| | + | | + | | = | |

ನಾನು ತಯಾರಿಸಿದ ನಮೂನೆ

## ನನ್ನ ಮರ




ಗಣಿತ ಪ್ರದರ್ಶನವನ್ನು ನೋಡಲು ಬರುವ ಎಲ್ಲರಿಗೂ ಹಣ್ಣಿನ ಗಿಡಗಳನ್ನು ವಿತರಿಸುತ್ತಿದ್ದಾರೆ.

| ಗಿಡಗಳು | ಒಂದನೇ ದಿನ ವಿತರಿಸಿದ್ದು | ಎರಡನೇ ದಿನ ವಿತರಿಸಿದ್ದು | ಒಟ್ಟು |
|---|---|---|---|
| ನೆಲ್ಲಿಕಾಯಿ | 238 | 241 | |
| ಮಾವು | 138 | 152 | |
| ಹಲಸು | 236 | 166 | |
| ಪೇರಳೆ | 175 | 246 | |

- ಅತಿ ಹೆಚ್ಚು ವಿತರಿಸಿದ ಗಿಡ ಯಾವುದು?
- ಒಟ್ಟು ಎಷ್ಟು ಮಾವಿನ ಗಿಡಗಳನ್ನು ವಿತರಿಸಲಾಯಿತು?
- ಇದೇ ರೀತಿಯಲ್ಲಿ ಇನ್ನೂ ಹೆಚ್ಚು ಪ್ರಶ್ನೆಗಳನ್ನು ತಯಾರಿಸಿ...

## ಮೌಲ್ಯಮಾಪನ ಚಟುವಟಿಕೆಗಳು

**1.** ಬಿಬಿಯ ಶಾಲೆಯ ಮಕ್ಕಳು ಗಣಿತೋತ್ಸವ ಸ್ಟಾಲಿಗೆ ನೀಡಲು ಸಂಗ್ರಹಿಸಿದ ಮಂಜಟ್ಟಿ ಕಾಯಿಗಳ ಸಂಖ್ಯೆಯನ್ನು ನೋಡಿರಿ.

ತರಗತಿ 1

| ವಿಭಾಗ | ಸಂಖ್ಯೆ |
|---|---|
| **A** | **275** |
| **B** | **325** |

ತರಗತಿ 2

| ವಿಭಾಗ | ಸಂಖ್ಯೆ |
|---|---|
| **A** | **300** |
| **B** | **225** |

ತರಗತಿ 3

| ವಿಭಾಗ | ಸಂಖ್ಯೆ |
|---|---|
| **A** | **375** |
| **B** | **215** |

ತರಗತಿ 4

| ವಿಭಾಗ | ಸಂಖ್ಯೆ |
|---|---|
| **A** | **245** |
| **B** | **350** |

A. ಪ್ರತಿಯೊಂದು ತರಗತಿಯಿಂದ ಸಂಗ್ರಹಿಸಿದ ಒಟ್ಟು ಮಂಜಟ್ಟಿಕಾಯಿಗಳು

ತರಗತಿ 1 ☐ ತರಗತಿ 2 ☐

ತರಗತಿ 3 ☐ ತರಗತಿ 4 ☐

B. ಅತಿ ಹೆಚ್ಚು ಮಂಜಟ್ಟಿ ಕಾಯಿಗಳನ್ನು ಸಂಗ್ರಹಿಸಿದ ತರಗತಿ ಯಾವುದು?

ತರಗತಿ ☐ ಸಂಖ್ಯೆ ☐

C. ಸಂಗ್ರಹಿಸಿದ ಮಂಜಟ್ಟಿ ಕಾಯಿಗಳ ಸಂಖ್ಯೆಗಳನ್ನು ಆರೋಹಣ ಕ್ರಮದಲ್ಲಿ ಬರೆಯಿರಿ...

☐ ☐ ☐ ☐

D. ಯಾವ ಎರಡು ತರಗತಿಗಳ ಮಂಜಟ್ಟಿಕಾಯಿಗಳ ಸಂಖ್ಯೆಗಳನ್ನು ಕೂಡಿಸಿದರೆ 1120 ಸಿಗುವುದು ?

☐ + ☐ = 1120

E. ಎರಡು ತರಗತಿಗಳ ಮಂಜಟ್ಟಿ ಕಾಯಿಗಳ ಮೊತ್ತದೊಂದಿಗೆ 5 ನ್ನು ಸೇರಿಸಿದರೆ 1200 ಸಿಗುವುದು. ಆ ಎರಡು ತರಗತಿಗಳು ಯಾವುದಾಗಿರಬಹುದು? ಸರಿಯಾದ ಉತ್ತರಕ್ಕೆ ಗುರುತು (✓) ಮಾಡಿರಿ.

| A. ತರಗತಿ 1, ತರಗತಿ 2 | B. ತರಗತಿ 2, ತರಗತಿ 3 | C. ತರಗತಿ 1, ತರಗತಿ 4 |
|---|---|---|

F. ಪ್ರತಿಯೊಂದು ತರಗತಿಯಿಂದ ಸಂಗ್ರಹಿಸಿದ ಮಂಜಟ್ಟಿಕಾಯಿಗಳ ಸಂಖ್ಯೆ 1000 ಆಗಬೇಕಾದರೆ ಇನ್ನೂ ಎಷ್ಟು ಮಂಜಟ್ಟಿಕಾಯಿಗಳು ಬೇಕಾಗಬಹುದು?

| ತರಗತಿ | ಸಂಗ್ರಹಿಸಿದ ಮಂಜಟ್ಟಿಕಾಯಿಗಳ ಸಂಖ್ಯೆ | 1000 ಆಗಲು ಬೇಕಾದ ಸಂಖ್ಯೆ |
|---|---|---|
| 1 | | |
| 2 | | |
| 3 | | |
| 4 | | |

**2.** ನಮೂನೆಗಳನ್ನು ಮುಂದುವರಿಸಬಹುದೇ?

A. 140, 260, 380, ..................., ..................., ...................

B. 25, 225, 425, ..................., ..................., ...................

C. 600, 610, 630, 660, ..................., ...................

D. 200, 310, 430, ..................., ..................., ...................

E. 0, 115, 230, 345 ..................., ...................

ಇವುಗಳಲ್ಲಿ 200 ರಂತೆ ಹೆಚ್ಚಾಗುವ ನಮೂನೆ ಯಾವುದು?

**3.** ಮುತ್ತಣಿ ಶಾಲಾ ಸ್ಟೋರಿನಲ್ಲಿ ಒಂದನೇ ದಿನ 847 ರೂಪಾಯಿಗಳು ಸಿಕ್ಕಿದುವು. ಎರಡನೇ ದಿನ ಅವರಿಗೆ 500 ರೂಪಾಯಿಯ ಮತ್ತು ನೂರು ರೂಪಾಯಿಯ ಒಂದೊಂದು ನೋಟುಗಳು, 50 ರೂಪಾಯಿಯ 5 ನೋಟುಗಳು, 2 ರೂಪಾಯಿಯ ಎರಡು ನಾಣ್ಯಗಳು ಸಿಕ್ಕಿದುವು.

A. ಹೆಚ್ಚು ಹಣ ಸಿಕ್ಕಿದುದು ಯಾವ ದಿನ ?

ನನ್ನ ಊಹೆ

ನನ್ನ ಮಾಡಿದ ರೀತಿ

ನನ್ನ ಉತ್ತರ

B. ಎರಡೂ ದಿನಗಳಲ್ಲಿ ಒಟ್ಟು ಸಿಕ್ಕಿದ ಹಣವೆಷ್ಟು ?

ನನ್ನ ಊಹೆ ______ ಮತ್ತು ______ ರ ನಡುವೆ

ನಾನು ಮಾಡಿದ ಲೆಕ್ಕ

**4.** ಕೆಳಗೆ ನೀಡಿರುವ ಕ್ರಿಯೆಗಳಲ್ಲಿ ಯಾವುದರ ಉತ್ತರವು 846 ಆಗಿದೆ?

A. 524 + 312 B. 227 + 519 C. 546 + 400 D. 329 + 517

ನನ್ನ ಉತ್ತರ

**5.** ಬಾಯಿ ಲೆಕ್ಕವಾಗಿ ಉತ್ತರ ಬರೆಯಿರಿ. ಕಂಡುಕೊಂಡ ರೀತಿಯನ್ನು ಹೇಳಿರಿ.

A. 550 + 450 = ...................... B. 675 + 425 = ......................

C. 730 + 520 = ...................... D. 890 + 460 = ......................

E. 436 + 324 = ...................... F. 253 + 147 = ......................

# 5

# ಅಳೆಯುವ... ಬರೆಯುವ...

## ಗೋಲಿ ಆಡುವ

ಅಲನ್ ಮತ್ತು ಗೆಳೆಯರು ಗೋಲಿ ಆಡುತ್ತಿದ್ದಾರೆ.






ಅಲನ್ ಮತ್ತು ಗೆಳೆಯ ಗೋಲಿ ಉರುಳಿಸಿದ ದೂರವನ್ನು ಪಾದದಿಂದ ಅಳತೆ ಮಾಡಿದರು. ಆದರೆ ಇವರಿಬ್ಬರಿಗೂ ಸಿಕ್ಕಿರುವುದು ಒಂದೇ ಅಳತೆ ಅಲ್ಲ. ಈ ಸಮಸ್ಯೆಯನ್ನು ಅವರೇ ಬಗೆಹರಿಸಿದರು.
ಅದು ಹೇಗಾಗಿರಬಹುದು?

## ಸ್ಕೇಲಿನ ಅಳತೆ

ನೀವು ಕೂಡ ಸ್ಕೇಲನ್ನು ತೆಗೆದುಕೊಳ್ಳಿರಿ.... ಅದರಲ್ಲಿ ಏನೆಲ್ಲಾ ಮಾಹಿತಿಗಳನ್ನು ನೀಡಲಾಗಿದೆ?

- ಸಣ್ಣ ಗೆರೆಗಳಿವೆ.
-
-
-
-
-
-






## ಉದ್ದವನ್ನು ಅಳೆಯೋಣ



ಪೆನ್ನಿನ ಉದ್ದ [ ]          ಪೆನ್ಸಿಲ್ ನ ಉದ್ದ [ ]




ರಬ್ಬರಿನ ಉದ್ದ [ ]

ಸ್ಕೇಲಿನಲ್ಲಿ ಸೆಂಟಿಮೀಟರನ್ನು ಗುರುತಿಸಿರುವುದರ ಕೆಳಭಾಗದಲ್ಲಿ ದೊಡ್ಡ ಅಳತೆಯನ್ನು ನೋಡಿರಿ... ಈ ಅಳತೆಯನ್ನು 'ಇಂಚು' ಎನ್ನುವರು.



ಅಲನ್ ಮತ್ತು ಗೆಳೆಯರು ಗೋಲಿ ಉರುಳಿಸಿದ ಗುರುತುಗಳ ಚಿತ್ರವನ್ನು ನೋಡಿರಿ... ಹೆಚ್ಚು ಉದ್ದದ ಗೆರೆ ಯಾವುದು?

ನಿಮ್ಮ ಊಹೆಯನ್ನು ಸರಿ (✓) ಚಿಹ್ನೆ ಹಾಕಿ ಗುರುತಿಸಿರಿ.

ಪ್ರತಿಯೊಂದು ಗೆರೆಯ ಉದ್ದವನ್ನು ಅಳೆದು ಗೆರೆಯ ಮೇಲೆ ಬರೆಯಿರಿ.

## ಯಾವ ಯಾವ ಪೆನ್ಸಿಲ್?

ಪೆನ್ಸಿಲ್ ಉಪಯೋಗಿಸಿ ಅಲನ್ ತಯಾರಿಸಿದ ಆಕೃತಿಯನ್ನು ನೋಡಿರಿ...
ಕೆಳಗೆ ನೀಡಿರುವ ಪೆಟ್ಟಿಗೆಯಲ್ಲಿ ಯಾವ ಯಾವ ಪೆನ್ಸಿಲುಗಳನ್ನು ಇರಿಸಬಹುದು?
ಆ ಪೆನ್ಸಿಲುಗಳ ಎದುರು (✓) ಗುರುತು ಹಾಕಿರಿ.



ಪೆನ್ಸಿಲ್ ಆಕೃತಿಯನ್ನು ಕಂಡಿರಲ್ಲವೇ? ಇದೇ ರೀತಿಯಲ್ಲಿ ಮಡಲ ಕಡ್ಡಿಗಳನ್ನು ಸರಿಯಾದ ಅಳತೆಯಲ್ಲಿ ತುಂಡರಿಸಿ ನಿಮಗೆ ಇಷ್ಟವಿರುವ ಆಕೃತಿಗಳನ್ನು ನಿರ್ಮಿಸಿರಿ.

## ಆಕೃತಿಗಳನ್ನು ರಚಿಸುವ

ನೀವು ತೆಗೆದುಕೊಂಡ ಮಡಲ ಕಡ್ಡಿಗಳಲ್ಲಿ ಒಂದೇ ಉದ್ದದವುಗಳಿವೆಯೇ? ಅವುಗಳ ಉದ್ದ ಮತ್ತು ಸಂಖ್ಯೆಯನ್ನು ಪಟ್ಟಿಯಲ್ಲಿ ಬರೆಯಿರಿ.

| ಉದ್ದ | ಸಂಖ್ಯೆ |
|---|---|
| | |
| | |
| | |
| | |

## ಒಟ್ಟು ಸೇರಿಸಿದರೆ

10, 11, 12, 13, 14, 15 ಸೆಂಟಿಮೀಟರ್ ಉದ್ದವಿರುವ ಮಡಲ ಕಡ್ಡಿಗಳನ್ನು ತೆಗೆದುಕೊಳ್ಳಿರಿ. ಇವುಗಳನ್ನು ಒಂದರ ಹಿಂದೆ ಒಂದರಂತೆ ತಾಗಿಸಿ ಇಟ್ಟರೆ ಒಟ್ಟು ಎಷ್ಟು ಸೆಂಟಿಮೀಟರ್ ಉದ್ದ ಆಗಬಹುದು ?

25 ಸೆಂಟಿಮೀಟರ್ ಉದ್ದ ಲಭಿಸುವ ಜೋಡಿಗಳು ಯಾವುವು ?

## ಅಳೆದು ಗುರುತಿಸುವ




ನಿಮ್ಮ ಮನೆಯಲ್ಲಿರುವ ವಿವಿಧ ವಸ್ತುಗಳ ಉದ್ದವನ್ನು ಅಳೆದು ಪಟ್ಟಿಯಲ್ಲಿ ಬರೆಯಿರಿ.

| ವಸ್ತುಗಳ ಹೆಸರು | ಊಹೆ (ಸೆಂಟಿಮೀಟರ್) | ಅಳತೆ (ಸೆಂಟಿಮೀಟರ್) |
|---|---|---|
| | | |
| | | |
| | | |
| | | |
| | | |
| | | |
| | | |
| | | |

ಒಂದೇ ಉದ್ದವಿರುವ ವಸ್ತುಗಳು

## ದೊಡ್ಡ ಸ್ಕೇಲು




ಟೀಚರ್ ನಿಮಗೆ ಪೇಪರ್ ತುಂಡುಗಳನ್ನು ನೀಡಿದರಲ್ಲವೇ? ನಿಮಗೆ ಲಭಿಸಿದ ತುಂಡಿನ ಉದ್ದವೆಷ್ಟು?

| ನನ್ನ ಊಹೆ | ಅಳತೆಮಾಡಿ ಲಭಿಸಿದ ಉದ್ದ |
|---|---|
| ಸೆ.ಮೀ | ಸೆ.ಮೀ |

ವಿಭಿನ್ನವಾದ ಉದ್ದವಿರುವ ಪೇಪರ್ ತುಂಡುಗಳು ಲಭಿಸಿದ ಐದು ಮಂದಿ ಸೇರಿ ಗುಂಪಾಗಿರಿ.... ಪೇಪರ್ ತುಂಡಿನ ಉದ್ದವನ್ನು ಪಟ್ಟಿಯಲ್ಲಿ ಸೇರಿಸಿರಿ...

| ಕ್ರಮ ಸಂಖ್ಯೆ | ಹೆಸರು | ಊಹೆ | ಅಳತೆ |
|---|---|---|---|
| | | | |
| | | | |
| | | | |
| | | | |
| | | | |

ಐದು ಮಂದಿಯ ಪೇಪರ್ ತುಂಡುಗಳನ್ನು ಜೋಡಿಸಿದರೆ ಒಟ್ಟು ಎಷ್ಟು ಉದ್ದ ಆಗಬಹುದು ?



ಊಹೆ

[ ]

ಉದ್ದ

[ ]

ಎಲ್ಲಾ ಗುಂಪಿನಲ್ಲೂ ಲಭಿಸಿದ್ದು 100 ಸೆಂಟಿಮೀಟರ್ ಅಲ್ಲವೇ ?
100 ಸೆಂಟಿಮೀಟರ್ ಎಂದರೆ **ಒಂದು ಮೀಟರ್** ಆಗಿದೆ.



**100 ಸೆಂಟಿಮೀಟರ್ = 1 ಮೀಟರ್**

## ತರಗತಿ ಕೋಣೆಯ ಉದ್ದ

ಮೀಟರ್ ಸ್ಕೇಲ್ ಮತ್ತು 30 ಸೆಂಟಿಮೀಟರ್ ಸ್ಕೇಲನ್ನು ಟೀಚರ್ ಪರಿಚಯಿಸಿದರಲ್ಲವೇ?

ನಿಮ್ಮ ತರಗತಿ ಕೋಣೆಯ ಉದ್ದವೆಷ್ಟು?

ಊಹೆ [ ] ಅಳತೆ [ ]

ಜಗಲಿಯ ಉದ್ದ?

ಊಹೆ [ ] ಅಳತೆ [ ]

ನಿಮ್ಮ ತರಗತಿಯ ಬೆಂಚು, ಡೆಸ್ಕು, ಬೋರ್ಡು ಎಂಬಿವುಗಳ ಉದ್ದವನ್ನು ಊಹಿಸಿ ಮತ್ತು ಅಳತೆ ಮಾಡಿ ಬರೆಯಿರಿ.

| | ಊಹೆ | ಅಳತೆ |
|---|---|---|
| ಬೆಂಚು | | |
| ಡೆಸ್ಕು | | |
| ಬೋರ್ಡು | | |
| | | |



## ನಿಲ್ಲಿರಿ... ಜಿಗಿಯಿರಿ...

ಇಂದು ನಾವು ಸ್ಟೇಂಡಿಂಗ್ ಬ್ರೋಡ್ ಜಂಪ್ ಆಡೋಣ... ಪ್ರತೀ ಮಗುವೂ ಒಂದು ಗೆರೆಯಲ್ಲಿ ನಿಂತು ಮುಂದಕ್ಕೆ ಜಿಗಿಯಬೇಕು. ಭಾಗವಹಿಸಿದವರ ಹೆಸರು ಮತ್ತು ಜಿಗಿದ ದೂರವನ್ನು ಪಟ್ಟಿಯಲ್ಲಿ ಬರೆಯಿರಿ.

| ಸ್ಥಾನಕ್ರಮ | ಹೆಸರು | ಜಿಗಿದ ದೂರ (ಸೆಂಟಿಮೀಟರಿನಲ್ಲಿ) |
|---|---|---|
| | | |
| | | |
| | | |
| | | |
| | | |

ಒಂದು ಮೀಟರಿಗಿಂತ ಹೆಚ್ಚು ಜಿಗಿದವರು ಯಾರು ಯಾರು?

## ನನಗೆ ಸಿಕ್ಕಿದ ಬಹುಮಾನ

ನಿಮಗೆಲ್ಲರಿಗೂ ಒಂದು ಬಹುಮಾನವಿದೆ. ಅದು ಏನಾಗಿರಬಹುದು?

ಕಂಡುಹಿಡಿದುದಕ್ಕಾಗಿ ಈ ನಮೂನೆಯನ್ನು ಪೂರ್ತಿಗೊಳಿಸಿರಿ.

250, 275, 300, ........... , ..............

ಕೆಳಗಿರುವ ಸಂಖ್ಯೆಗಳನ್ನು ನಮೂನೆಗಳ ಕ್ರಮದಲ್ಲಿ ಗೆರೆ ಎಳೆದು ಜೋಡಿಸಿರಿ.




ನೀಡಿರುವ ಗೆರೆಯ ಉದ್ದ ಎಷ್ಟು ?

ನನ್ನ ಊಹೆ

ಅಳೆದಾಗ ಸಿಕ್ಕಿದ ಉದ್ದ

ರಚಿಸಿದ ಎಲ್ಲಾ ಗೆರೆಗಳ ಉದ್ದ ಒಂದೇ ಆಗಿದೆಯೇ?

ಚಿತ್ರಕ್ಕೆ ಬಣ್ಣ ಹಚ್ಚಿರಿ... ನಿಮಗೆ ಲಭಿಸಿದ ಬಹುಮಾನವೇನು?

## ಎತ್ತರವೆಷ್ಟು ?

ಸ್ಟೇಂಡಿಂಗ್ ಬ್ರೋಡ್ ಜಂಪ್ ಸ್ಪರ್ಧೆಯ ವಿಜೇತರ ಚಿತ್ರವನ್ನು ನೋಡಿರಿ...




ಎಲ್ಲರೂ ಒಂದೇ ಎತ್ತರದಲ್ಲಿ ನಿಂತಿದ್ದಾರೆಯೇ?

ಹೆಚ್ಚು ಎತ್ತರದಲ್ಲಿರುವುದು ಯಾರು?

ಪಟ್ಟಿಯನ್ನು ಪೂರ್ತಿಗೊಳಿಸಿರಿ...

| ಎತ್ತರಗಳು | ಊಹಿಸಿದ ಅಳತೆ | ಅಳತೆ ಮಾಡಿದಾಗ ಸಿಕ್ಕಿದ್ದು |
|---|---|---|
| ನೆಲದಿಂದ ಬೋರ್ಡಿಗಿರುವ ಎತ್ತರ | | |
| ನೆಲದಿಂದ ಸ್ವಿಚ್ ಬೋರ್ಡಿಗಿರುವ ಎತ್ತರ | | |
| ನೆಲದಿಂದ ಕಿಟಿಕಿಗಿರುವ ಎತ್ತರ | | |
| ಬಾಗಿಲಿನ ಎತ್ತರ | | |
| ಮೇಜಿನ ಎತ್ತರ | | |

ನಿಮ್ಮ ತರಗತಿ ಕೋಣೆಯ ಎತ್ತರ ಎಷ್ಟು? ಹೇಗೆ ಅಳತೆ ಮಾಡಬಹುದು?

ನನ್ನ ಊಹೆ

ಅಳತೆ ಮಾಡಿದಾಗ ಸಿಕ್ಕಿದ್ದು

ನನ್ನ ಎತ್ತರ

## ನೀವು ಅಳೆದವುಗಳಲ್ಲಿ

ಒಂದು ಮೀಟರಿಗಿಂತ ಹೆಚ್ಚು ಎತ್ತರವಿರುವವುಗಳು ಯಾವುವು?

ಆ ಅಳತೆಗಳನ್ನು ಮೀಟರ್ ಮತ್ತು ಸೆಂಟಿಮೀಟರ್‌ಗಳಲ್ಲಿ ಬರೆದು ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ವಸ್ತು | ಎತ್ತರ | |
|---|---|---|
| | ಸೆಂಟಿಮೀಟರಿನಲ್ಲಿ | ಮೀಟರ್ ಮತ್ತು ಸೆಂಟಿಮೀಟರಿನಲ್ಲಿ |
| | | |
| | | |
| | | |

## ಸುತ್ತಲೂ ಅಳೆಯುವ



ಕಂಬದ ತೋರ ಎಷ್ಟು?

ಇದೇ ರೀತಿ ನೀವೂ ಅಳತೆ ಮಾಡಿರಿ...

ಯಾವುದನ್ನೆಲ್ಲಾ ಅಳತೆ ಮಾಡಬಹುದು ?



ನೀರಿನ ಬಾಟಲಿಯ ಸುತ್ತಲು

ಮೇಜಿನ ಮೇಲ್ಭಾಗದ ಸುತ್ತಲು

ಕೈಯ ತೋರ

## ಒಟ್ಟು ಉದ್ದ

ಮಡಲಕಡ್ಡಿಗಳಿಂದ ಆಯತವನ್ನು ರಚಿಸಿರಿ.

ಇದಕ್ಕೆ ಉಪಯೋಗಿಸಿದ ಮಡಲ ಕಡ್ಡಿಗಳ ಒಟ್ಟು ಉದ್ದವೆಷ್ಟು?

ಮಡಲ ಕಡ್ಡಿಗಳಿಂದ ತ್ರಿಕೋನವನ್ನು ರಚಿಸಿರಿ. ಇದಕ್ಕೆ ಉಪಯೋಗಿಸಿದ ಮಡಲ ಕಡ್ಡಿಗಳ ಒಟ್ಟು ಉದ್ದವೆಷ್ಟು ?

ಒಂದೇ ಉದ್ದದ ಮಡಲ ಕಡ್ಡಿಗಳನ್ನು ಉಪಯೋಗಿಸಿ ಆಯತವನ್ನು ರಚಿಸಿರಿ. ಮಡಲ ಕಡ್ಡಿಗಳ ಒಟ್ಟು ಉದ್ದವೆಷ್ಟು?

ಒಂದೇ ಉದ್ದದ ಮಡಲ ಕಡ್ಡಿಗಳಿಂದ ತ್ರಿಕೋನ ರಚಿಸಿರಿ. ಮಡಲ ಕಡ್ಡಿಗಳ ಒಟ್ಟು ಉದ್ದವೆಷ್ಟು ?

## ಉಗಿಬಂಡಿ ಆಟ




ಉಗಿಬಂಡಿ ಆಟವಾಡಲು ಅಲನ್ ಮತ್ತು ಗೆಳೆಯರು 350 ಸೆಂಟಿಮೀಟರ್‌ನಂತೆ ಉದ್ದವಿರುವ ಒಂದು ನೀಲಿ ಬಣ್ಣದ ರಿಬ್ಬನ್ ಹಾಗೂ ಒಂದು ಕೆಂಪು ಬಣ್ಣದ ರಿಬ್ಬನ್ ಖರೀದಿಸಿದರು.

ರಿಬ್ಬನಿನ ಒಟ್ಟು ಉದ್ದವೆಷ್ಟು?

ಅವರು ರಿಬ್ಬನುಗಳನ್ನು ಒಂದಕ್ಕೊಂದು ಸೇರಿಸಿ ಉರುಟು ಆಕೃತಿಯಲ್ಲಿ ಕಟ್ಟಿದಾಗ ಉದ್ದವು 20 ಸೆಂಟಿಮೀಟರ್ ಕಡಿಮೆಯಾಯಿತು .

ಈಗ ರಿಬ್ಬನಿನ ಉದ್ದವೆಷ್ಟು?

ಪ್ರಶ್ನೆ ಓದಿದಾಗ ನಾನು ತಿಳಿದುಕೊಂಡದ್ದು

ಉತ್ತರ ಕಂಡುಹಿಡಿಯಲು ಅಗತ್ಯವಾದ ವಿವರಗಳು

ನಾನು ಲೆಕ್ಕ ಮಾಡಿದ ರೀತಿ

ಸಿಕ್ಕಿದ ಉತ್ತರ

ಉರುಟಿನ ಒಳಗೆ ಎಲ್ಲರಿಗೂ ನಿಲ್ಲಲು ಸಾಧ್ಯವಾಗದ ಕಾರಣ ಅವರು ಆರು ಮೀಟರ್‌ನಂತೆ ಉದ್ದವಿರುವ ನೀಲಿ ಹಾಗೂ ಕೆಂಪು ಬಣ್ಣದ ರಿಬ್ಬನ್‌ಗಳನ್ನು ಖರೀದಿಸಿದರು.

ಎರಡೂ ರಿಬ್ಬನ್‌ಗಳ ಒಟ್ಟು ಉದ್ದವೆಷ್ಟು?

ಒಂದು ಮೀಟರ್ ರಿಬ್ಬನಿನ ಬೆಲೆ 10 ರೂಪಾಯಿ. ಹಾಗಾದರೆ ಉಗಿಬಂಡಿ ಆಟಕ್ಕೆ ಖರೀದಿಸಿದ ರಿಬ್ಬನಿಗೆ ಒಟ್ಟು ಎಷ್ಟು ರೂಪಾಯಿ ಆಗಿರಬಹುದು?

## ಮೌಲ್ಯಮಾಪನ ಚಟುವಟಿಕೆಗಳು

**1.** ಹೆಚ್ಚು ಉದ್ದ



ಇವುಗಳಲ್ಲಿ ಹೆಚ್ಚು ಉದ್ದವಿರುವುದು ಯಾವುದು?

ಉದ್ದವೆಷ್ಟು?

ವಸ್ತುಗಳ ಹೆಸರು ಮತ್ತು ಉದ್ದವನ್ನು ಅನುಕ್ರಮವಾಗಿ ಬರೆಯಿರಿ.

**2.** A B C D E F G H I J K L M N O P

ಕೆಳಗೆ ನೀಡಿರುವವುಗಳಲ್ಲಿ ಅತಿ ಹೆಚ್ಚು ಉದ್ದ ಯಾವುದು?

*i.* A ಯಿಂದ F ತನಕ

*ii.* B ಯಿಂದ J ತನಕ

*iii.* J ಯಿಂದ N ತನಕ

*iv.* E ಯಿಂದ K ತನಕ

**3.** ಸಮಾನವಾದ ಉದ್ದ

- ಮಡಲ ಕಡ್ಡಿಗಳನ್ನು ಉಪಯೋಗಿಸಿ ನಿಮ್ಮ ಗಣಿತ ಪಾಠ ಪುಸ್ತಕದ ಅಳತೆಯಲ್ಲಿರುವ ಆಯತವನ್ನು ರಚಿಸಿರಿ.
- ಅವುಗಳಲ್ಲಿ ಒಂದೇ ಉದ್ದದ ಮಡಲ ಕಡ್ಡಿಗಳಿವೆಯೇ?

| ಉದ್ದ | ಸಂಖ್ಯೆ |
|---|---|
| | |
| | |

- ಮಡಲ ಕಡ್ಡಿಗಳ ಒಟ್ಟು ಉದ್ದವೆಷ್ಟು?

**4.** ಸೀರೆಯ ಉದ್ದ

ಅಮ್ಮ ಖರೀದಿಸಿದ ಸೀರೆಯ ಉದ್ದ 6 ಮೀಟರ್ ಆಗಿದೆ. ರವಿಕೆ ಹೊಲಿಯಲು 70 ಸೆಂಟಿಮೀಟರ್ ಬಟ್ಟೆಯನ್ನು ಅದರಿಂದ ಕತ್ತರಿಸಿ ತೆಗೆದರು.

ಬಾಕಿ ಉದ್ದವೆಷ್ಟು? ಸೆಂಟಿಮೀಟರಿನಲ್ಲಿ ಬರೆಯಿರಿ

# 6

# ಕೂಡಿಸಿ... ಕೂಡಿಸಿ ಕೂಡಿಸುವ



## ಗ್ರಾಮೋತ್ಸವ

ಮಲ್ಲಮೂಲೆಯಲ್ಲಿ ಗ್ರಾಮೋತ್ಸವ ನಡೆಯುತ್ತಿದೆ. ಮಕ್ಕಳಿಗಾಗಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಅನು ಮತ್ತು ಅಲನ್ ಕೋಣೆಗಳನ್ನು ಜಿಗಿಯುವ ಆಟದಲ್ಲಿ ಭಾಗವಹಿಸುತ್ತಿದ್ದಾರೆ.




ಅನು ಗೆರೆಗಳನ್ನು ಮೆಟ್ಟದೆ ಒಂದು ಕೋಣೆಯನ್ನು ಬಿಟ್ಟು ಇನ್ನೊಂದು ಕೋಣೆಗೆ ಜಿಗಿಯುವಳು. ಜಿಗಿಯುವ ಕೋಣೆಗಳಲ್ಲಿರುವ ನೆಲ್ಲಿಕಾಯಿಗಳು ಬಹುಮಾನವಾಗಿ ಸಿಗುವುದು.

ಅನುವು ಜಿಗಿದ ಕೋಣೆಗಳಿಗೆ ಬಣ್ಣ ಹಚ್ಚಿರಿ...

ಅಲನ್ ಸ್ಪರ್ಧಿಸುವ ಹಿರಿಯ ಮಕ್ಕಳ ವಿಭಾಗದಲ್ಲಿ ನಾಲ್ಕರಂತೆ ಕೋಣೆಗಳನ್ನು ಬಿಟ್ಟು ಜಿಗಿಯಬೇಕು. ಪ್ರತಿಯೊಂದು ಕೋಣೆಯಲ್ಲಿ ಐದರಂತೆ ನೆಲ್ಲಿಕಾಯಿಗಳಿವೆ.

ಪಟ್ಟಿಯನ್ನು ಪೂರ್ತಿಗೊಳಿಸುವ:

| ಜಿಗಿತ | 1 | 2 | 3 | 4 | 5 | 6 |
|---|---|---|---|---|---|---|
| ಅನುವಿಗೆ ಲಭಿಸಿದ ನೆಲ್ಲಿಕಾಯಿಗಳು | 2 | | | | | |
| ಅಲನ್ ಗೆ ಲಭಿಸಿದ ನೆಲ್ಲಿಕಾಯಿಗಳು | 5 | | | | | |

## ರಸಪ್ರಶ್ನೆ ಸ್ಪರ್ಧೆ

ರಸಪ್ರಶ್ನೆ ಸ್ಪರ್ಧೆಗೆ ಒಂದು ತಂಡದಲ್ಲಿ ಇಬ್ಬರಿದ್ದಾರೆ. 10 ತಂಡಗಳು ಇವೆ.

ಹಾಗಾದರೆ ಒಟ್ಟು ಎಷ್ಟು ಮಂದಿ ಸ್ಪರ್ಧಿಸಿದ್ದಾರೆ?

## ಮಧ್ಯಾಹ್ನದ ಊಟ



ಚಿತ್ರವನ್ನು ನೋಡಿರಿ...

ಎಷ್ಟು ಮಂದಿಗೆ ಊಟಕ್ಕೆ ಎಲೆ ಹಾಕಿದ್ದಾರೆ?

ಲೆಕ್ಕ ಮಾಡಿದ್ದು ಹೇಗೆ?

ಒಂದು ಮೇಜಿನಲ್ಲಿ ಎಷ್ಟು ಎಲೆಗಳಿವೆ ?

ಎಷ್ಟು ಮೇಜುಗಳಿವೆ?

ಒಟ್ಟು ಎಷ್ಟು ಮಂದಿಗೆ ಎಲೆ ಹಾಕಲಾಗಿದೆ?

ಇನ್ನೊಂದು ಮೇಜನ್ನು ಇರಿಸಿದರೆ ಎಷ್ಟು ಮಂದಿಗೆ ಎಲೆ ಹಾಕಬಹುದು?

## ಬೆಲೂನುಗಳು



ಒಂದೇ ಬಣ್ಣದ ಬೆಲೂನುಗಳನ್ನು ಮೂರರಂತೆ ಒಟ್ಟಿಗೆ ನೇತಾಡಿಸಲಾಗಿದೆ.

ಒಟ್ಟು ಎಷ್ಟು ಬೆಲೂನುಗಳಿವೆ?

ಚಿತ್ರವನ್ನು ನೋಡಿ ಒಂದೇ ಬಣ್ಣದ ಬೆಲೂನುಗಳ ಸಂಖ್ಯೆಯನ್ನು ಪಟ್ಟಿಯಲ್ಲಿ ಬರೆಯಿರಿ.

| | | | |
|---|---|---|---|
|  | $3 + 3$ | $2 \times 3$ | 6 |
|  | | | |
|  | | | |

ಒಟ್ಟು ಎಷ್ಟು ಬೆಲೂನುಗಳಿವೆ?

ಲೆಕ್ಕ ಮಾಡಿದ್ದು ಹೇಗೆ?

**ಪಟ್ಟಿಯನ್ನು ಪೂರ್ತಿಗೊಳಿಸಿರಿ...**

| | | | | |
|---|---|---|---|---|
|  | | | 1 × 3 | 3 |
|  | 3 + 3 | ಎರಡು ಸಲ 3 | 2 × 3 | 6 |
|  | | | | |
|  | | | | |
|  | 3 + 3 + 3 + 3+ 3 | ಐದು ಸಲ 3 | 5 × 3 | 15 |
|  | | | | |
|  | | | | |
|  | | | | |

9 × 3 = ☐

10 × 3 = ☐

11 × 3 = ☐

12 × 3 = ☐

100 × 3 = 300

101 × 3 = 303

102 × 3 = 306

103 × 3 = .........

............................

110 × 3 = .........

120 × 3 = .........

............................

ನಾನು ಲೆಕ್ಕ ಮಾಡಿದ ರೀತಿ

☐

## ಹೇಗೆಲ್ಲ ಹೇಳಬಹುದು?




## ಇಮ್ಮಡಿಯನ್ನು ಕಂಡುಹಿಡಿಯಿರಿ

| | | | |
|---|---|---|---|
| 3 ರ ಇಮ್ಮಡಿ | 3 + 3 | 2 × 3 | 6 |
| 4 ರ ಇಮ್ಮಡಿ | | | |
| 5 ರ ಇಮ್ಮಡಿ | | | |
| 10 ರ ಇಮ್ಮಡಿ | | | |
| 20 ರ ಇಮ್ಮಡಿ | | | |
| 25 ರ ಇಮ್ಮಡಿ | | | |
| 50 ರ ಇಮ್ಮಡಿ | | | |
| 100 ರ ಇಮ್ಮಡಿ | | | |

ಪಟ್ಟಿಯಿಂದ ನಾನು ತಿಳಿದುಕೊಂಡದ್ದು...

## ಕುಟುಂಬಶ್ರೀ ಸ್ಟಾಲ್






ಅನು ಮಧ್ಯಾಹ್ನದ ಊಟದ ನಂತರ ಕುಟುಂಬಶ್ರೀ ಸ್ಟಾಲಿಗೆ ಹೋದಳು. ಅಲ್ಲಿ ಸಾಬೂನುಗಳ ಪ್ಯಾಕೆಟ್ ಮಾಡುತ್ತಿದ್ದರು. ಒಂದು ಪ್ಯಾಕೆಟಿನಲ್ಲಿ 4 ಸಾಬೂನುಗಳು. ಹಾಗಾದರೆ 5 ಪ್ಯಾಕೆಟುಗಳನ್ನು ಮಾಡಲು ಎಷ್ಟು ಸಾಬೂನುಗಳು ಬೇಕಾಗಬಹುದು?

ನಾನು ಲೆಕ್ಕ ಮಾಡಿದ ರೀತಿ

## ರಿಲೇ ಸ್ಪರ್ಧೆ



ರಿಲೇ ಓಟದಲ್ಲಿ 4 ತಂಡಗಳು ಭಾಗವಹಿಸಿದವು. ಒಂದು ತಂಡದಲ್ಲಿ 4 ಮಂದಿ. ಒಟ್ಟು ಎಷ್ಟು ಮಂದಿ ಸ್ಪರ್ಧಿಸಿದರು?

3 ಐದುಗಳು ಸೇರಿದ ಸಂಖ್ಯೆ ಎಷ್ಟು ಮೂರುಗಳು ಸೇರಿದ ಸಂಖ್ಯೆಗೆ ಸಮಾನವಾಗಿದೆ?

## ಬಹುಮಾನ ವಿತರಣೆ



ಗ್ರಾಮೋತ್ಸವದ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದವರಿಗೆ ತಲಾ 4 ರಂತೆ ತರಕಾರಿ ಗಿಡಗಳನ್ನು ಬಹುಮಾನವಾಗಿ ನೀಡಬೇಕು. ಒಟ್ಟು 7 ಸ್ಪರ್ಧೆಗಳಿವೆ. ಬಹುಮಾನ ನೀಡಲು ಎಷ್ಟು ಗಿಡಗಳು ಬೇಕು?

| | | |
|---|---|---|
| ಐದು ಸಲ 4 ಸೇರಿದರೆ | 4 + 4 + 4 + 4 + 4 | 5 × 4 = 20 |
| ಆರು ಸಲ 4 ಸೇರಿದರೆ | 4 + 4 + 4 + 4 + 4 + 4 | |
| | | |
| | | |
| | | |

| ಹತ್ತು ಸಲ 4 ಸೇರಿದರೆ | ಹನ್ನೆರಡು ಸಲ 4 ಸೇರಿದರೆ |
|---|---|
| ........ × ........ = ........ | ........ × ........ = ........ |

14 × 4 = ☐ 16 × 4 = ☐ 18 × 4 = ☐

20 × 4 = ☐ 15 × 4 = ☐ 13 × 4 = ☐

## ಸಮಾರೋಪ ಸಮಾರಂಭ

ಸಮಾರಂಭ ಜರಗುವ ಸ್ಥಳದಲ್ಲಿ ಕುರ್ಚಿಗಳನ್ನು ಇರಿಸಲಾಗಿದೆ. ಒಂದು ಸಾಲಿನಲ್ಲಿ ಆರು ಕುರ್ಚಿಗಳಿವೆ.

ಮೊದಲ 3 ಸಾಲುಗಳಲ್ಲಿ ಮಕ್ಕಳು ಕುಳಿತರು. ಒಟ್ಟು ಎಷ್ಟು ಮಕ್ಕಳು ಕುಳಿತುಕೊಂಡರು?



6 + 6 + 6 = 3 × 6 = ______

ನಂತರದ ಆರು ಸಾಲುಗಳಲ್ಲಿ ಎಷ್ಟು ಮಂದಿಗೆ ಕುಳಿತುಕೊಳ್ಳಬಹುದು?

______ = ______ = ______

ಅಲ್ಲಿಯೂ ಮಕ್ಕಳು ಕುಳಿತರು. ಕುಳಿತುಕೊಂಡ ಒಟ್ಟು ಮಕ್ಕಳ ಸಂಖ್ಯೆ ಎಷ್ಟು?

| ನಾನು ಲೆಕ್ಕ ಮಾಡಿದ ರೀತಿ | ಇನ್ನೊಂದು ರೀತಿ |
|---|---|
| | |

ಇನ್ನೂ ಹತ್ತು ಸಾಲುಗಳು ಖಾಲಿ ಇವೆ. ಎಷ್ಟು ಮಂದಿಗೆ ಕುಳಿತುಕೊಳ್ಳಬಹುದು? ______

ಸಮಾರಂಭ ಸ್ಥಳದಲ್ಲಿ ಒಟ್ಟು ಎಷ್ಟು ಮಂದಿಗೆ ಕುಳಿತುಕೊಳ್ಳಬಹುದು? ______

## ಗುಣಿಸುವ... ಪಟ್ಟಿಯನ್ನು ಪೂರ್ತಿಗೊಳಿಸುವ...

| × | 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|---|
| 1 | | | | | | | | | | |
| 2 | | | | | | 12 | | | | |
| 3 | | | | 12 | | | | | | |
| 4 | | | 12 | | | | | | | |
| 5 | | | | | | | | | | |
| 6 | | 12 | | | | | | | | |

## ಕೂಡಿಸಿದರೂ... ಗುಣಿಸಿದರೂ...

$1 + 1 = 2$

$1 \times 1 = 1$

$2 + 3 = 5$

$2 \times 3 = 6$

$2 + 3 + 4 = 9$

$2 \times 3 \times 4 = 24$

ಇಲ್ಲಿ ಸಂಖ್ಯೆಗಳನ್ನು ಕೂಡಿಸುವಾಗ ಮತ್ತು ಗುಣಿಸುವಾಗ ಬೇರೆ ಬೇರೆ ಸಂಖ್ಯೆಗಳು ಉತ್ತರವಾಗಿ ಲಭಿಸುವುದು. ಕೂಡಿಸುವಾಗ ಮತ್ತು ಗುಣಿಸುವಾಗ ಒಂದೇ ಉತ್ತರ ಲಭಿಸುವ ಸಂಖ್ಯೆಗಳನ್ನು ಕಂಡುಹಿಡಿಯಿರಿ.

ಪ್ರತಿಯೊಂದನ್ನೂ ನೋಡಿರಿ... ಪೂರ್ತಿಗೊಳಿಸಿರಿ.

| | | | |
|---|---|---|---|
| $2 \times 3 = 6$ | $2 \times 4 =$ ..... | $2 \times 5 =$ ..... | $2 \times 6 =$ ..... |
| $4 \times 3 = 12$ | $4 \times 4 =$ ..... | $4 \times 5 =$ ..... | $4 \times 6 =$ ..... |
| $8 \times 3 = 24$ | $8 \times 4 =$ ..... | $8 \times 5 =$ ..... | $8 \times 6 =$ ..... |

ನೀವು ಕಂಡುಹಿಡಿದ ಸಂಖ್ಯಾ ಸಂಬಂಧಗಳೇನು?

ಯಾವೆಲ್ಲ ಸಂಖ್ಯೆಗಳನ್ನು ಪರಸ್ಪರ ಗುಣಿಸಿದಾಗ 12 ಸಿಗುವುದು?

**12**

- 2 × 6
- ...... × 1
- ...... × ......
- 3 ×...... × 2

ಯಾವೆಲ್ಲ ಸಂಖ್ಯೆಗಳನ್ನು ಪರಸ್ಪರ ಗುಣಿಸಿದಾಗ 24 ಸಿಗುವುದು?

**24**

- 1 × 24
- 
- 
- 

20 ನ್ನು ಇದೇ ರೀತಿಯಲ್ಲಿ ಬರೆಯಿರಿ...

**ಖಾಲಿ ಬಿಟ್ಟ ಸ್ಥಳವನ್ನು ಪೂರ್ತಿಗೊಳಿಸಿರಿ...**

**60**

- 6 × .......
- 20 × .......
- 30 × .......
- 15 × .......
- 12 × .......
- ....... × 1



## ಮೌಲ್ಯಮಾಪನ ಚಟುವಟಿಕೆಗಳು

1. ಅನು ಸೂಪರ್ ಮಾರ್ಕೆಟಿಗೆ ತಲುಪಿದಳು. ಅವಳಿಗೆ ಐದು ಪೆನ್ನುಗಳು ಬೇಕಾಗಿವೆ. ಒಂದು ಪೆನ್ನಿಗೆ ಆರು ರೂಪಾಯಿ. ಆರು ಪೆನ್ನುಗಳಿರುವ ಒಂದು ಪ್ಯಾಕೆಟಿನ ಬೆಲೆ 30 ರೂಪಾಯಿ. ಒಂದು ಪ್ಯಾಕೆಟ್ ಪೆನ್ನನ್ನು ಖರೀದಿಸಿದರೆ ಅನುವಿಗೆ ಸಿಗುವ ಲಾಭವೇನು?

2. ಕ್ರಿಕೆಟ್ ಪಂದ್ಯಾಟ

ಎ. ಕ್ರಿಕೆಟ್ ಪಂದ್ಯಾಟದಲ್ಲಿ ಒಂದು ಓವರ್‌ಗೆ ಆರು ಬಾರಿ ಚೆಂಡನ್ನು ಎಸೆಯಬೇಕು. ಟ್ವೆಂಟಿ - ಟ್ವೆಂಟಿ ಆಟದಲ್ಲಿ ಒಂದು ತಂಡ ಎಷ್ಟು ಬಾರಿ ಚೆಂಡನ್ನು ಎಸೆಯಬೇಕು?

ಬಿ. 50 ಓವರಿನ ಏಕದಿನ ಪಂದ್ಯಾಟದಲ್ಲಿ ಎರಡು ತಂಡಗಳು ಸೇರಿ ಎಷ್ಟು ಬಾರಿ ಚೆಂಡನ್ನು ಎಸೆಯಬೇಕು?

3. ಯಾರಿಗೆ ಹೆಚ್ಚು ರನ್ಸ್?

ಒಂದು ಪಂದ್ಯಾಟದಲ್ಲಿ ಅಲನ್ ಮತ್ತು ಅವನ ಗೆಳೆಯ ಗಳಿಸಿದ ರನ್ನುಗಳನ್ನು ಪಟ್ಟಿಯಲ್ಲಿ ನೀಡಲಾಗಿದೆ.

| ಅಲನ್ | | |
|---|---|---|
| 2 ಸಿಕ್ಸರ್ | 2 × 6 | **12** |
| 5 ಫೋರ್ | 5 × 4 | |
| 4 ಡಬಲ್ | 4 × 2 | |
| 5 ಸಿಂಗಲ್ | 5 × 1 | |

| ಗೆಳೆಯ | | |
|---|---|---|
| 4 ಸಿಕ್ಸರ್ | | |
| 3 ಫೋರ್ | | |
| 2 ಡಬಲ್ | | |
| 2 ಸಿಂಗಲ್ | | |

ಹೆಚ್ಚು ರನ್ಸ್ ಗಳಿಸಿದವರು ಯಾರು?

ಎಷ್ಟು ಹೆಚ್ಚು?

ಒಂದು ಓವರಿನಲ್ಲಿ ಆರು ಸಿಕ್ಸರ್‌ಗಳನ್ನು ಬಾರಿಸಿದರೆ ಎಷ್ಟು ರನ್ನುಗಳು ಸಿಗಬಹುದು?

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಆನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ...ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


**ಸಂಪರ್ಕಿಸಬೇಕಾದ ವಿಳಾಸ**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.


**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in